# ಮಾನಸ ಗಂಗೋತ್ರಿ

## ದಸರಾ ವಿಶೇಷ ಸಂಚಿಕೆ

ಸಂಪುಟ ೪೭ | ಅಕ್ಟೋಬರ್ ೨೦೧೭, | ಪುಟ ೧


# ಅದ್ಧೂರಿ ಜಂಬೂ ಸವಾರಿ

– ಆಖಿಲ್ ಅಹ್ಮದ್. ಎಂ

**ಮೈಸೂರು:** ನಾಡಿನ ಪರಂಪರೆ, ಸಂಸ್ಕೃತಿಯ ವಿಶ್ವದರ್ಶನ ಮೂಡಿಸುವ ಜಗದ್ವಿಖ್ಯಾತ ಜಂಬೂ ಸವಾರಿ ಮೆರವಣಿಗೆಯೊಂದಿಗೆ ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ತೆರೆಬಿತ್ತು. ನವರಾತ್ರಿ ಉತ್ಸವದ ನವೋಲ್ಲಾಸದ ಬಳಿಕ ೧೦ನೇ ದಿನವಾದ ಶನಿವಾರ ವರ್ಣರಂಜಿತವಾಗಿ ನಡೆದ ಮೆರವಣಿಗೆಯನ್ನು ಲಕ್ಷಾಂತರ ಜನರು ಕಣ್ತುಂಬಿಕೊಂಡರು.

೫೭ ವರ್ಷದ ಅರ್ಜುನ ಆನೆ ೬ನೇ ಬಾರಿಗೆ ೭೫೦ ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ನಾಡಿನ ಅಧಿದೇವತೆಯಾದ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಹೊತ್ತು ಗಾಂಭೀರ್ಯದಿಂದ ಹೆಜ್ಜೆಹಾಕಿದ್ದು ಲಕ್ಷಾಂತರ ಭಕ್ತರನ್ನು ಪುಳಕಿತಗೊಳಿಸಿತು. ಇದಕ್ಕೂ ಮುನ್ನ ಮಧ್ಯಾಹ್ನ ೨.೨೫ಕ್ಕೆ ಶುಭ ಮಕರ ಲಗ್ನದಲ್ಲಿ ಅರಮನೆಯ ಬಲರಾಮ ದ್ವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಜಯದಶಮಿ ಮೆರವಣಿಗೆಗೆ ಚಾಲನೆ ನೀಡಿದರು. ಶನಿವಾರ ಸಂಜೆ ೫.೦೧ ಗಂಟೆ ಸಲ್ಲುವ ಶುಭ ಕುಂಭಲಗ್ನದಲ್ಲಿ ಅಂಬಾರಿಯಲ್ಲಿ ಪ್ರತಿಷ್ಠಾಪನೆ ಗೊಂಡಿದ್ದ ಚಾಮುಂಡೇಶ್ವರಿ ವಿಗ್ರಹಕ್ಕೆ ಸಿದ್ದರಾಮಯ್ಯರವರು ಪುಷ್ಪಾರ್ಚನೆ ಮಾಡಿದರು.

ಅಂಬಾರಿ ಹೊತ್ತ ಆನೆ ಬಂದು ನಿಲ್ಲುತ್ತಿದ್ದಂತೆ ಅಶ್ವಾರೋಹಿ ದಳದ ಕಮಾಂಡೆಂಟ್ ಪಥ ಸಂಚಲನಕ್ಕೆ ಅನುಮತಿ ಕೋರಿದರು. ವಿಜಯದ ಸಂಕೇತವಾಗಿ ೨೧ ಕುಶಾಲು ತೋಪುಗಳು ಮೊಳಗಿತು. ನಂತರ ಪೊಲೀಸ್ ವಾದ್ಯವೃಂದವರು ರಾಷ್ಟ್ರ ಗೀತೆ ನುಡಿಸಿ ಗೌರವ ವಂದನೆ ಸಲ್ಲಿಸಿದರು. ಅನುತರ ಮಂಗಳ ವಾದ್ಯ ಪೊಲೀಸ್ ವಾದ್ಯವೃಂದ, ರಕ್ಷಣಾ ಪಡೆಗಳ ಗೌರವ,ಅಶ್ವಾರೋಹಿ ದಳದೊಂದಿಗೆ ಚಿನ್ನದ ಅಂಬಾರಿ ಹೊತ್ತ ಅರ್ಜುನ ಶಾಂತ ಚಿತ್ತಾಗಿ ಹೆಜ್ಜೆ ಹಾಕಿದನು.

## ಜಂಬೂ ಸವಾರಿಯ ಮೂಲಕ ನವರಾತ್ರಿಗೆ ತೆರೆ



> ಕಳೆದ ಎರಡು ವರ್ಷಗಳಿಂದ ಬರಗಾಲ ಬಂದು ಸರಳ ದಸರಾವನ್ನು ಆಚರಿಸಲಾಗಿತ್ತು. ಆದರೆ ಈ ವರ್ಷ ಉತ್ತಮ ಮಳೆಯಾಗಿದ್ದು, ರೈತರ ಮೊಗದಲ್ಲಿ ಸಂತಸ ತಂದಿದೆ.
>
> - **ಸಿದ್ದರಾಮಯ್ಯ**, ಮುಖ್ಯಮಂತ್ರಿ

**ಜಂಬೂಸವಾರಿಯ ಮೂಲಕ ನವರಾತ್ರಿಗೆ ತೆರೆ ಅಂಬಾರಿಯಲ್ಲಿನ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ ನಮಸ್ಕರಿಸುವ ಸಂದರ್ಭ..**

ಬರದ ಬೇಗೆಯಿಂದ ಕಳೆದ ೨ ವರ್ಷಗಳಿಂದ ಸರಳ ಮತ್ತು ಸಾಂಪ್ರದಾಯಿಕ ಹೆಸರಿನಲ್ಲಿ ಕಳೆಗುಂದಿದ್ದ ದಸರಾಕ್ಕೆ ಈ ಬಾರಿ ವೈವಿಧ್ಯತೆಯೊಂದಿಗೆ ಅದ್ಧೂರಿಯ ಮಾದರಿ ಯಲ್ಲಿ ಆಚರಿಸಲಾಯಿತು. ಜಂಬೂ ಸವಾರಿ ಮೆರವಣಿಗೆಯನ್ನು ನಿಶಾನೆ ಆನೆ ಬಲರಾಮ ಮುನ್ನಡೆಸಿದರೆ, ನೌಪತ್ ಆನೆಗಳಾದ ಅಭಿಮನ್ಯು ಪ್ರಶಾಂತ್, ಗೋಪಿ, ಹರ್ಷ, ವಿಕ್ರಮ ಆನೆಗಳು ನಿಶಾನೆ ಆನೆಯನ್ನು ಹಿಂಬಾಲಿಸಿದವು.

ಇದೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಮಹಾಪೌರ ಎಂ.ಜೆ.ರವಿಕುಮಾರ್, ಜಿಲ್ಲಾಧಿಕಾರಿ ಡಿ.ರಂದೀಪ್, ನಗರ ಪೋಲೀಸ್ ಆಯುಕ್ತ ಡಾ.ಎ.ಸುಬ್ರಮಣ್ಯೇಶ್ವರರಾವ್, ರಾಜವಂಶಸ್ಥ ಯದು ವೀರ ಕೃಷ್ಣದತ್ತ ಚಾಮರಾಜ ಇತರರು ಹಾಜರಿದ್ದರು.

## ನಿತ್ಯೋತ್ಸವ ಕವಿಯಿಂದ ದಸರೋತ್ಸವ ಚಾಲನೆ



**ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ನಡೆದ ದಸರಾ ಉದ್ಘಾಟನೆಯನ್ನು ಕವಿ ನಿಸಾರ್ ಅಹ್ಮದ್ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಉಮಾಶ್ರೀ, ಪ್ರಾಥಮಿಕ ಶಿಕ್ಷಣ ಸಚಿವ ತನ್ವೀರ್ ಸೇಠ್ ಇತರರು ಹಾಜರಿದ್ದರು.**

–ರಕ್ಷಿತ ಬಿ.ಎನ್

ವಿಶ್ವವಿಖ್ಯಾತ ನಾಡ–ನುಡಿ,ಸಾಂಸ್ಕೃತಿಕ ಪರಂಪರೆಯ ೪೦೭ನೇ ಮೈಸೂರು ದಸರಾ ಮಹೋತ್ಸವಕ್ಕೆ ಮುನ್ನುಡಿ ಬರೆಯುವ ಘಳಿಗೆ ಆರಂಭವಾ ಯಿತು. ಆಗಷ್ಟೇ ಮಳೆ ನಿಂತು, ಬೆಳಗಿನ ಜಾವ ಇಬ್ಬನಿಯಿಂದ ಕೂಡಿದ ಬೆಟ್ಟ, ಸುತ್ತ ಸ್ವಚ್ಚ ಹಸಿರೆಲೆಯ ಮರ–ಗಿಡಗಳ ಸೊಬಗು, ತಣ್ಣನೆಯ ಗಾಳಿ ಈ ಸಮಾರಂಭಕ್ಕೆ ಸ್ವಾಭಾವಿಕ ಮೆರಗು ನೀಡಿತು.

೨೦೧೭ರ ಸಾಲಿನ ದಸರಾ ಮಹೋತ್ಸವ ದ ಉದ್ಘಾಟನಾ ಕಾರ್ಯಕ್ರಮವನ್ನು ಮುಂಜಾನೆ ಸುಮಾರು ೯ ಗಂಟೆಗೆ ನಾಡದೇವತೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಬೆಟ್ಟದ ದೇಗಲದ ಆವರಣದಲ್ಲಿ ಹಮ್ಮಿಕೊಳ್ಳ ಲಾಗಿತ್ತು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪ್ರೋ.ಕೆ.ಸ್ ನಸಾರ್ ಅಹ್ಮದ್ ರವರು ಈ ಬಾರಿಯ ದಸರಾ ಉದ್ಘಾಟಕರಾಗಿದ್ದು ಮೊದಲಿಗೆ ಚಾಮುಂಡೇಶ್ವರಿ ದೇವತೆಗೆ ಅಗ್ರಪೂಜೆ ಸಲ್ಲಿಸಿ ಸಂಸ್ಕೃತಿ ಬೆಸೆಯುವ ನವರಾತ್ರಿಗೆ ಚಾಲನೆ ನೀಡಿದರು. ವೇದಿಕೆಯಲ್ಲಿದ್ದ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಹೂಗಳನ್ನು ದೇವಿಗೆ ಅರ್ಪಿಸಿದರು. ದೇವಿಯ ದರ್ಶನ ಕ್ಕೆಂದು ಬಂದಿದ್ದ ಜನರೇ ಪ್ರೇಕ್ಷಕರಾಗಿದ್ದರು.

**ಪ್ರಮುಖ ಕಾರ್ಯಕ್ರಮಗಳ ಉದ್ಘಾಟನೆ:**

ಸಾರ್ವಜನಿಕರಿಗೆ ಸ್ಥಳಗಳ ಬಗ್ಗೆ ಮಾಹಿತಿ ಮತ್ತು ಪೊಲೀಸ್ ಸಹಾಯ ನೀಡಲು ನಗರದ ೩೦ ಸ್ಥಳಗಳಲ್ಲಿ ಪೊಲೀಸ್ ಸಹಾಯ ಕೇಂದ್ರಗಳನ್ನು ಸ್ಥಾಪಿಸಿದ್ದು ಅದಕ್ಕೆ ಸಿದ್ದರಾಮಯ್ಯರವರು ಚಾಲನೆ ನೀಡಿದರು. ಅಲ್ಲದೆ ಚಿತ್ರೋತ್ಸವ, ಆಹಾರ ಮೇಳ,ರೈತ ದಸರಾ, ಮಹಿಳಾ ದಸರ, ಯೋಗ ದಸರಾ ಕಾರ್ಯ ಕ್ರಮಗಳ ಉದ್ಘಾಟನೆ ಮಾಡಿದರು.

## ರೈತ ದಸರಾದಲ್ಲಿ ಮೇಳೈಸಿದ ಗ್ರಾಮೀಣ ಸೊಗಡು

–ನಿಸರ್ಗ ಸಿ.ಎನ್.

ಸಾಲು ಸಾಲು ಎತ್ತಿನ ಗಾಡಿಗಳು, ನಗರದ ಮಧ್ಯ ಭಾಗದಲ್ಲೂ ದೇಸಿ ಸೊಗಡು, ಕುರಿ ಮಂದೆಯ ಜೊತೆ ಸಾಗುತ್ತಿದ್ದ ಅವುಗಳ ಒಡೆಯ. ಜಾನಪದ ಕಲಾತಂಡಗಳ ಮೆರುಗು, ಡೊಳ್ಳು, ತಮಟೆಯ ನಾದ, ಹಳ್ಳಿಗಳಲ್ಲಿ ನಡೆಯುವ ಸುಗ್ಗಿಯ ಸೊಬಗನ್ನು ನೆನಪಿಸಿದ ಸನ್ನಿವೇಶ.. ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಶುಕ್ರವಾರ ಸಾಗಿಬಂದ ರೈತ ದಸರಾದ ಮೆರವಣಿಗೆಯಲ್ಲಿ ಕಂಡ ಚಿತ್ರಣವಿದು.

ಕಂಸಾಳೆ, ಡೊಳ್ಳು ಕುಣಿತ, ತಮಟೆ, ವಿವಿಧ ಜನಪದ ವೇಷ, ಸ್ತಬ್ಧಚಿತ್ರಗಳ ಜೊತೆಗೆ ಸಾಗಿದ ಮೆರವಣಿಗೆಗೆ ಎತ್ತಿನಗಾಡಿ ಗಳನ್ನು ಮುನ್ನಡೆಸುವ ಮೂಲಕ ಮೇಯರ್ ಎಂ.ಕೆ.ರವಿಕುಮಾರ್ ಚಾಲನೆ ನೀಡಿದರು. ಕೃಷಿ, ತೋಟ ಗಾರಿಕೆ, ಪಶುಪಾಲನೆ ಮತ್ತು ಹೈನುಗಾರಿಕೆ, ಅರಣ್ಯಕ್ಕೆ ಸಂಬಂಧಿಸಿದ ಸ್ತಬ್ಧಚಿತ್ರಗಳು ಮನಸೆಳೆದವು. ಪೂರ್ಣಕುಂಭ ಹೊತ್ತ ಮಹಿಳೆಯರು ಮೆರವಣಿಗೆಗೆ ಮೆರುಗು ನೀಡಿದರು.

ಜೆ.ಕೆ.ಮೈದಾನದಲ್ಲಿ ಹಮ್ಮಿಕೊಂಡಿದ್ದ ಕೃಷಿ ವಸ್ತುಪ್ರ ದರ್ಶನವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ಶಿವಣ್ಣ ಉದ್ಘಾಟಿ ಸಿದರು. ವೈಜ್ಞಾನಿಕ ಬೇಸಾಯ ಮಾದರಿ, ಕಿರು ಅಣೆಕಟ್ಟೆ, ನೀರಾವರಿ ಪದ್ಧತಿಯ ಕುರಿತ ಕೃಷಿ ಇಲಾಖೆಯ ಪ್ರತ್ಯಕ್ಷಿಕೆ ಗಮನ ಸೆಳೆಯಿತು. ತೋಟಗಾರಿಕೆ ಇಲಾಖೆ ಅಭಿವೃದ್ಧಿಪಡಿಸಿರುವ ವಿವಿಧ ತಳಿಗಳು, ಅವುಗಳ ಇಳುವರಿ, ನಾಟಿ ಯಂತ್ರಗಳು, ಸಮೃದ್ಧ ಬೆಳೆಗಳ ಪ್ರದರ್ಶನ ರೈತರ ಮನ ಸೆಳೆಯುವಂತಿತ್ತು. ಮಂಡ್ಯದ ವಿ.ಸಿ.ಫಾರಂ, ನಾಗನಹಳ್ಳಿಯ ಸಾವಯವ ಕೃಷಿ ಸಂಶೋಧನಾ ಕೇಂದ್ರ, ಮೀನುಗಾರಿಕಾ ಇಲಾಖೆ, ಪಶುಪಾಲನೆ ಮತ್ತು ಸೇವಾ ಇಲಾಖೆ, ರೇಷ್ಮೆ ಇಲಾಖೆಯ ಮಳಿಗೆಗಳಲ್ಲಿ ಮಾಹಿತಿ, ಪ್ರಾತ್ಯಕ್ಷಿಕೆಗಳನ್ನೂ ನೀಡಲಾಗುತ್ತಿತ್ತು. ಕೃಷಿ ಯಂತ್ರೋಪಕರಣಗಳಿಗೆ ಸಿಗುವ ಸಹಾಯಧನದ ಬಗ್ಗೆಯೂ ಅಧಿಕಾರಿಗಳು ರೈತರಿಗೆ ಮಾಹಿತಿ ನೀಡಿದರು.

ರೈತರು ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿ ಕೊಳ್ಳಬೇಕು. ಇದರಿಂದ ಇಳುವರಿಯೂ ಅಧಿಕಗೊಂಡು ರೈತರು ಲಾಭಗಳಿಸಬಹುದು. ಸಾಂಪ್ರದಾಯಿಕ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿರುವ ರೈತರು ಹೊಸ ಪದ್ಧತಿಯನ್ನು ಒಪ್ಪಿಕೊಳ್ಳಬೇಕು ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಂ.ಶಿವಣ್ಣ ಸಲಹೆ ನೀಡಿದರು. ರೈತರಲ್ಲಿ ಕೌಶಲದ ಕೊರತೆ ಇದೆ. ಅದನ್ನು ನೀಗಿಸಬೇಕು. ನೀರಿನ ಸದ್ಬಳಕೆ ಆಗಬೇಕು. ಅಲ್ಲದೆ, ಮುಂದಿನ ದಿನಗಳಲ್ಲಿ ಆಹಾರದ ಕೊರತೆ ಆಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರೈತ ದಸರಾ ಉಪಸಮಿತಿ ಅಧ್ಯಕ್ಷ ಚೌಹಳ್ಳಿ ಪುಟ್ಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಮಜದೇವ ಗಾಣಿಗ್, ಹಿರೇಹಳ್ಳಿ ಸೋಮೇಶ್,ದಯಾನಂದ ಮೂರ್ತಿ, ರಮೇಶ್, ಸಿ.ಶಿವಶಂಕರ್, ರವಿಶಂಕರ್, ಜಂಟಿ ಕೃಷಿ ನಿರ್ದೇಶಕ ಕೆ.ಎಂ.ಸೋಮಸುಂದ್ರ ಭಾಗವಹಿಸಿದ್ದರು.

## 'ದಸರಾಗೆ ಮೆರಗು ತಂದ ಹೆಲಿರೈಡ್'

೪೦೭ನೇ ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವದಲ್ಲಿನ ಪ್ರಮುಖ ಕಾರ್ಯಕ್ರಮಗಳಲ್ಲಿ ಹೆಲಿರೈಡ್‌ವೊಂದು ಆಕರ್ಷಣೀಯ ವಾಗಿದೆ. ಬೆಂಗಳೂರು ವಿಮಾನ ನಿಲ್ದಾಣದಿಂದ ಕರೆತಂದಿರುವ ಎರಡು ಹೆಲಿಕಾಪ್ಟರ್‌ಗಳು ಚಿಪ್ಸನ್ ಏವಿಟೇಷನ್ ಪ್ರೈವೇಟ್ ಲಿಮಿಟೆಡ್ ಅವರ ನೇತೃತ್ವದಲ್ಲಿ **"ಹೆಲಿಕಾಪ್ಟರ್ ರೈಡ್"** ಯೋಜನೆಯ ಮೂಲಕ ವೀಕ್ಷಣೆ ಮಾಡಲು ಸರ್ಕಾರವು



ಅವಕಾಶ ಕಲ್ಪಿಸಿಕೊಟ್ಟಿದೆ.

ಹೆಲಿಕಾಪ್ಟರ್ ರೈಡ್‌ನ ಅನುಭವ ತುಂಬ ಚೆನ್ನಾಗಿದ್ದು, ಮೈಸೂರಿನ ಅರಮನೆ, ಚಾಮುಂಡಿ ಬೆಟ್ಟ, ಜನಸಂದಣಿ,ವಾಹನಗಳು, ಎಲ್ಲವೂ ಮೇಲಿನಿಂದ ಪುಟ್ಟ ಪುಟ್ಟದಾಗಿ ಕಂಡವು. ಟಿಕೆಟ್ ದರ ಕಡಿಮೆ ಮಾಡಿದರೆ ಇನ್ನೂ ಹೆಚ್ಚಿನ ಜನರು ಬರುವರು ಎಂದು ೮ ವರ್ಷದ ಸುಷ್ರಾವ್ಯ ತಿಳಿಸಿದರು.


**ಪುಟ ವಿನ್ಯಾಸಕರು: ಸುನೀಲ ಗದೆಪ್ಪಗೋಳ, ಆಖಿಲ್ ಅಹ್ಮದ್, ನಿಸರ್ಗ ಸಿ.ಎನ್, ರಕ್ಷಿತ ಬಿ.ಎನ್, ತ್ಯಾಗರಾಜು.ಎಂ**

# ಕುಸ್ತಿಯ ಒಳ–ಹೊರಗು

**ಮೈ**ಸೂರಿನಲ್ಲಿ ಜಂಗೀ ಕುಸ್ತಿಮಾಡಲು ಪೈಲ್ವಾನರು ತಯಾರಾಗುತ್ತಿದ್ದರೆ, ಉದ್ದನೆಯ ಲೋಟದಲ್ಲಿ ಹಾಲು ಹೀರುತ್ತಿರುವ ಕುಸ್ತಿ ಪೈಲ್ವಾನರು ಮಟ್ಟಿಮಣ್ಣಿನಲ್ಲಿ ದೇಹದಂಡಿಸುವ ದಾಂಡಿಗರು ಕಟ್ಟುಮಸ್ತಾದ ದೇಹ ದಾರ್ಢ್ಯದೊಂದಿಗೆ ಸೆಣೆಸಾಡಲು ತಿಂಗಳುಗಟ್ಟಲೇ ದೇಹದಂಡಿ ಸುತ್ತಿರುವ ದೃಶ್ಯಗಳು ದಸರಾ ವೇಳೆ ಸರ್ವೇ ಸಾಮಾನ್ಯ, ರಾಜ ಮಹಾರಾಜರಿಂದ ಪೋಷಿಸಲ್ಪಟ್ಟ ಕುಸ್ತಿ ಯನ್ನು ಮೈಸೂರಿಗರು ಇಂದಿಗೂ ಉಳಿಸಿ ಬೆಳೆಸಿಕೊಂಡು ಬಂದಿ ದ್ದಾರೆ.

ಸಂಗೊಳ್ಳಿ ರಾಯಣ್ಣ, ಮೈಸೂರಿನ ರಣಧೀರ ಕಂಠೀರವ ನರಸಿಂಹರಾಜ ಒಡೆಯರ್ ಮೊದಲಾದವರು ಈ ಕಲೆಯಲ್ಲಿ ಅಸಾಧಾರಣ ಚತುರತೆಯನ್ನು ಸಂಪಾದಿ ಸಿದ್ದರು. ರಣಧೀರ ಕಂಠೀರವ ನರಸಿಂಹ ರಾಜ ಒಡೆಯರು ಮಾರುವೇಷದಲ್ಲಿ ಹೋಗಿ ತಿರುಚಾನಪಳ್ಳಿ ಜಟ್ಟಿಯನ್ನು ಸೋಲಿಸಿದ ಕಥೆಯಂತೂ ಇತಿಹಾಸ ಪ್ರಸಿದ್ಧ. ಹಿಂದಿನ ಕಾಲದಲ್ಲಿ ಸೈನಿಕರಿಗೆ ಕಡ್ಡಾಯವಾಗಿ ಈ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಮದಕರಿ ನಾಯಕರ ಕಾಲದ ಗರಡಿಮನೆಗಳನ್ನು ಚಿತ್ರದುರ್ಗದ ಕೋಟೆಯಲ್ಲಿ ನಾವು ಇಂದು ಕಾಣಬಹುದಾಗಿದೆ. ಗರಡಿ ಮನೆಯೊಳಗೆ ಕುಸ್ತಿ ಕಲಿಯುವ ಸ್ಥಳಕ್ಕೆ ಮಟ್ಟಿ (ಮಣ್ಣು) ಎಂದೂ, ಸ್ಪರ್ಧೆಯಲ್ಲಿ ಭಾಗವಹಿಸಿ ಕುಸ್ತಿ ಮಾಡುವ ಸ್ಥಳಕ್ಕೆ 'ಆಖಾಡ' (ಕುಸ್ತಿಯ ಕಣ) ಎಂದೂ ಕರೆಯುತ್ತಿದ್ದರು.

ಗರಡಿ ಮನೆಯೊಳಗೆ ಪ್ರವೇಶ ಮಾಡಿದ್ದೇ ಆದರೆ ಗುಹೆಯೊಳಗೆ ಪ್ರವೇಶ ಮಾಡಿದ ಅನುಭವವಾಗುತ್ತಿತ್ತು. ಗರಡಿ ಮನೆಗಳು ಚಿಕ್ಕದಾಗಿದ್ದು ಗಾಳಿ ಬೆಳಕು



ದಸರಾ ಕುಸ್ತಿಯಲ್ಲಿ ಮಗ್ನರಾಗಿರುವ ಕುಸ್ತಿಪಟುಗಳು

ಆಡದಂತೆ ಇರುತ್ತಿದ್ದುದಕ್ಕೆ ಇನ್ನೊಂದು ಕಾರಣ ಮೈ ಬೆವರು ಶೀಘ್ರವಾಗಿ ಹೊರಬೀಳಬೇಕೆಂಬುದೆ ಆಗಿತ್ತು. ಮೈಸೂರು ಮತ್ತು ಮಹಾರಾಷ್ಟ್ರದಲ್ಲಿ ಇಂದಿಗೂ ಅದೇ ಬಗೆಯ ಸುವ್ಯವಸ್ಥಿತವಾದ ಗರಡಿ ಮನೆಗಳಿವೆ. ಗರಡಿಮನೆಯಲ್ಲಿ ಅತ್ಯಂತ ಪ್ರಧಾನವಾದ ಭಾಗವೆಂದರೆ ಮಟ್ಟಿ ಅಂದರೆ ಕುಸ್ತಿ ಮಾಡುವ ಸ್ಥಳ. ಈ ಮಟ್ಟಿ ಕನಿಷ್ಟ ಪಕ್ಷ 4.27 ಮೀ ಇರುವ ಒಂದು ಚೌಕ, ಕುಸ್ತಿ ಮಾಡುವ ಸ್ಥಳವನ್ನು 30.5 ಸೆಂ.ಮೀ. ಆಳದ ವರೆಗೂ ಹುಡಿಮಣ್ಣಿನಿಂದ ತುಂಬಿರಬೇಕು. ಕೆಮ್ಮಣ್ಣು 100 ಚೀಲ, ಜೇಕಿನ ಗೆಡ್ಡೆಯಪುಡಿ 10 ಚೀಲ, ಕರ್ಪೂರ ಕುಂಕುಮ ತಲಾ 9ಕಿಲೊ ಗ್ರಾಂ, ಟಿಂಕ್ಚರ್ 20ಕಿಲೊ ಗ್ರಾಂ, ದೇವದಾರು ಎಣ್ಣೆ 20 ಮಣ, ಇವೇ ಮೊದಲಾದ ಸಾಮಗ್ರಿಗಳನ್ನು ಬೆರೆಸಿದ ಮಟ್ಟಿ ತುಂಬಾ ಆರೋಗ್ಯದಾಯಕವಾದುದ್ದು. ಕುಸ್ತಿ ಆಡಿ ಮುಗಿದ ಮೇಲೆ ಪೈಲ್ವಾನರು ಈ ಮಟ್ಟಿನಲ್ಲಿ ಉದ್ದುದ್ದವಾದ ಗುಂಡಿಯನ್ನು ತೆಗೆದು ಆದರಲ್ಲಿ ಕತ್ತನ್ನು ಮಾತ್ರ ಹೊರಗೆ ಬಿಟ್ಟು ಮಲಗಿಕೊಳ್ಳುತ್ತಾ ರಲ್ಲದೆ ದೇಹದ ತುಂಬ ಮಣ್ಣನ್ನು ಮುಚ್ಚಿಸಿಕೊಳ್ಳತ್ತಾರೆ. ಹೀಗೆ ಮಟ್ಟಿನಲ್ಲಿ ಮಲಗಿ ವಿಶ್ರಾಂತಿ ಪಡೆಯುವುದರಿಂದ ದೇಹದ ಕಾವೆಲ್ಲವೂ ಆರಿ ಹೋಗುವುದೆಂಬ ನಂಬಿಕೆ.

ಹಿಂದೆ ಹೆಣ್ಣು ಮಕ್ಕಳು ಗರಡಿ ಮನೆಯನ್ನು ಪ್ರವೇಶ ಮಾಡ ಬಾರದು ಎಂಬ ನಿಯಮವಿತ್ತು. ಒಂದು ವೇಳೆ ಪ್ರವೇಶ ಮಾಡಿದರೆ ಅಂಥವರ ತಲೆಗೂದಲೆಲ್ಲ ಉದುರಿ ಹೋಗುತ್ತದೆ ಎಂಬ ನಂಬಿಕೆ ಇತ್ತು. ಆದರೆ ಕುಸ್ತಿಗೆ ಹೆಚ್ಚು ಮಾನ್ಯತೆ ದೊರಕಿದಂತೆ ಇದೊಂದು ಅಂತರಾಷ್ಟ್ರಿಯ ಕ್ರೀಡೆಯಾ ಯಿತು. ಈಗೀಗ ಹೆಣ್ಣು ಮಕ್ಕಳು ಕುಸ್ತಿ ಯಲ್ಲೂ ಸೈ ಎನ್ನಿಸಿಕೊಳ್ಳುತ್ತಿದ್ದಾರೆ.

ಪೈಲ್ವಾನರುಗಳ ಆರಾಧ್ಯ ಧೈವವೆಂದರೆ ಮೌಲಾಲಿ ಮತ್ತು ಹನುಮಂತ, ಆದ್ದರಿಂದಲೇ ಎಲ್ಲ ಗರಡಿಮನೆಗಳಲ್ಲೂ ಹನುಮಂತ ಮತ್ತು ಮೌಲಾಲಿ ದೇವರುಗಳನ್ನು ಕಾಣಬಹುದು. ಸಾಮಾನ್ಯವಾಗಿ ಗರಡಿಮನೆಗಳಲ್ಲಿ ಕೆಳಗಡೆ ಮೂರು ಗುಂಡು, ಮೇಲ್ಗಡೆ ಒಂದು ಗುಂಡನ್ನು ಇಟ್ಟು ಇದನ್ನೆ ಮೌಲಾಲಿ ದೇವರೆಂದು ಪೂಜಿಸುತ್ತಾರೆ. ಕುಸ್ತಿ ಇರುವ ದಿವಸ ಪೈಲ್ವಾನರು ಆಖಾಡವನ್ನು ಪ್ರವೇಶಿಸುವಾಗ, ಯಾಲಿ ಮೌಲಾಲಿ, ಯಾಲಿ ಮದಾತ್, ಜೈ ಭಜರಂಗಬಲಿ ಘೋಷಣೆಗಳನ್ನು ಕೂಗುತ್ತಾರೆ.

–ರಕ್ಷಿತ.ಬಿ.ಎನ್

# ಹಳ್ಳಿ ನಾರಿ ರೈತ ಕ್ರೀಡೆಯಲ್ಲಿ ಜಯಭೇರಿ

ವಿಶ್ವ ವಿಖ್ಯಾತ 407ನೇ ಮೈಸೂರು ದಸರಾ ಅಂಗವಾಗಿ ನಗರದಲ್ಲಿ ಏರ್ಪಡಿಲಾಗಿದ್ದ ರೈತ ದಸರಾದಲ್ಲಿ ರೈತರ ಗಮನ ಸೆಳೆಯಲೆಂದೆ ಹಲವಾರು ಗ್ರಾಮೀಣ ಕ್ರೀಡೆಗಳನ್ನು ಏರ್ಪಡಿಲಾಗಿತ್ತು. ಇಂದಿನ ಆಧುನಿಕ ಯುಗದಲ್ಲಿ ಹಳೆ ಸಂಪ್ರದಾಯವನ್ನು ಮರೆತು ಸುಲಭವಾದ ಆಧುನಿಕರಣಕ್ಕೆ ಮಾರು ಹೋಗುತ್ತಿರುವ ಜನರಿಗೆ ಮತ್ತೆ ಹಳೇ ಸಂಪ್ರದಾಯವನ್ನು ಪರಿಚಯ ಮಾಡಿಕೊಡಲೆಂದೇ ರೈತದಸರಾದ ಗ್ರಾಮೀಣ ಕ್ರೀಡಾ ಕೂಟದಲ್ಲಿ ವಿವಿಧ ಕ್ರೀಡೆಯನ್ನು ಆಯೋಜಿಸಲಾಗಿತ್ತು. ಅದರಲ್ಲಿ ಮಹಿಳೆಯರ ನೀರು ಬಿಂದಿಗೆ ಓಟ ವಿಶಿಷ್ಟವಾಗಿತ್ತು. ಈ ಕ್ರೀಡೆಯಲ್ಲಿ ಹಲವಾರು ಸ್ಪರ್ಧಿಗಳು ಭಾಗವಹಿಸಿದ್ದರು, ಇದರಲ್ಲಿ ಶ್ರೀಮತಿ ಮಾಲಿನಿ ಹರೀಶ್‌ರವರು ಉತ್ತಮ ಸ್ಪರ್ಧಿಯಾಗಿದ್ದು ಪ್ರಥಮ ಸ್ಥಾನಗಳಿಸಿದ್ದಾರೆ.



ಬಿಂದಿಗೆ ಹೊತ್ತ ಓಟದಲ್ಲಿ ಮಾಲಿನಿ

ಮಾಲಿನಿ ಹರೀಶ್‌ರವರು ಪಿರಿಯಪಟ್ಟಣ ತಾಲ್ಲೂಕಿನ ಕೋಗಿಲವಾಡಿ ಗ್ರಾಮದವರಾಗಿದ್ದು, ಇವರು ಸತತವಾಗಿ ಏಳು ವರ್ಷಗಳಿಂದ ಈ ಕ್ರೀಡೆಗೆ ಆಗಮಿಸುತ್ತಿದ್ದು ಆ ಎಲ್ಲಾ ವರ್ಷಗಳಲ್ಲೂ ಕೂಡ ಇವರೆ ಪ್ರಥಮ ಸ್ಥಾನ ಗಿಟ್ಟಿಸಿಕೊಂಡಿರುವುದು ಗ್ರಾಮೀಣ ಮಟ್ಟದಲ್ಲಿ ಒಂದು ದೊಡ್ಡ ಸಾಧನೆ ಎಂದು ಹೇಳಬಹುದು. ಇವರಿಗೆ ನೀರು ಬಿಂದಿಗೆ ಓಟದಲ್ಲಿ ತುಂಬಾ ಆಸಕ್ತಿಯಿದ್ದು, ಇನ್ನೂ ಮುಂದಿನ ಹತ್ತು ವರ್ಷಗಳ. ಈ ಕ್ರೀಡೆಯಲ್ಲಿ ಭಾಗವಹಿಸಿ ಪ್ರತಿ ವರ್ಷದಲ್ಲಿಯೂ ಪ್ರಥಮ ಸ್ಥಾನ ಗಳಿಸಬೇಕೆಂಬುದು ಇವರ ಮಹಾದಾಸೆಯಾಗಿದೆ. ಇವರು ಮೂಲತಃ ಗೃಹಿಣಿಯಾಗಿದ್ದು ಆದಲ್ಲದೆ ಕೋಗಿಲವಾಡಿ ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರು ಕೂಡ ಹೌದು. ಇವರು ತಮ್ಮ ಕಾಲೇಜು ದಿನಗಳಿಂದಲೂ ಕ್ರೀಡೆಗೆ ಹೆಚ್ಚು ಆಸಕ್ತಿ ನೀಡಿದ್ದು ಜಿಲ್ಲಾ ಮಟ್ಟದವರೆಗೂ ಭಾಗವಹಿಸಿದ್ದಾರೆ.

ವಿವಾಹವಾದ ನಂತರದಲ್ಲಿ ತಮ್ಮ ಗ್ರಾಮದಲ್ಲಿ ಗೌಡ ಸಮಾಜ ವತಿಯಿಂದ ಆಯೋಜಿಸುವ ಅಥ್ಲೆಟಿಕ್ಸ್‌ಗಳಲ್ಲಿ ಭಾಗವಹಿಸುತ್ತಾರೆ ಹಾಗೂ ಮಡಿಕೇರಿಯಲ್ಲಿ ನಡೆಯುವ ರೈತದಸರಾದ ಗ್ರಾಮೀಣ ಕ್ರೀಡೆಯಲ್ಲೂ ಭಾಗವಹಿಸಿ ವಾರದ ಹಿಂದೆ ಅಲ್ಲಿಯೂ ಕೂಡ ಕಬ್ಬಡ್ಡಿ ಆಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಮಾಲಿನ ಹರೀಶ್‌ರವರಿಗೆ ಅವರ ಮನೆಯ ಎಲ್ಲರಿಂದಲೂ ಕೂಡ ಪ್ರೋತ್ಸಾಹವಿದ್ದು, ವಿಶಿಷ್ಟವಾಗಿ ಇವರ ಪತಿಯು ಇವರಲ್ಲಿದ್ದ ಕ್ರೀಡಾಸಕ್ತಿಯನ್ನು ಗಮನಿಸಿ ಅವರು ಕೂಡ ಹೆಚ್ಚಿನ ಮಟ್ಟದಲ್ಲಿ ಪ್ರೋತ್ಸಾಹ ನೀಡುತ್ತಿದ್ದಾರೆ. ಹಾಗೂ ಪಿರಿಯಪಟ್ಟಣದ ಕೃಷಿ ನೌಕರರಾದ ರಾಮಕೃಷ್ಣರವರು ಇಂತಹ ಗ್ರಾಮೀಣ ಕ್ರೀಡೆಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡಿ ಭಾಗವಹಿಸಲು ಸಹಾಯ ಮಾಡುತ್ತಾರೆ. ಇವರು ಮಾಡುತ್ತಿರುವ ಇಂತಹ ಸಾಧನೆಯು ಗ್ರಾಮೀಣ ಭಾಗದ ಹೆಣ್ಣುಮಕ್ಕಳಲ್ಲಿರುವ ಪ್ರತಿಭೆಯನ್ನು ಎತ್ತಿತೋರಿಸುತ್ತಿದೆ. ಇನ್ನುಳಿದ ಹೆಣ್ಣು ಮಕ್ಕಳು ಮತ್ತಷ್ಟು ಸಾಧನೆಗಳನ್ನು ಮಾಡಲು ಇವರು ಸ್ಪೂರ್ತಿಯಾಗಿದ್ದಾರೆ.

–ಚಂದ್ರು..ಬಿ.ಎನ್

# ಗಿಡಮೂಲಿಕೆ ಚಿಕಿತ್ಸೆಗೆ ಸಾಕ್ಷಿಯಾದ ದಸರಾ ಆಹಾರಮೇಳ

ದಸರಾ ಆಹಾರಮೇಳವು ಜನರಿಗೆ ರುಚಿ–ರುಚಿಯ ತಿಂಡಿ–ತಿನಸುಗಳನ್ನು ನೀಡುವುದಲ್ಲದೆ ಇಂಗ್ಲೀಷಿನ ಮೆಡಿಸಿನ್‌ಗಳಿಂದ ವಾಸಿಯಾಗದಂತಹ ಕೆಲವು ರೋಗ–ರುಜಿನಗಳಿಗೆ ಇಲ್ಲಿನ ಔಷಧಿಯಿಂದ ಪರಿಹಾರ ಸಿಗುವಂತಾಗಿದೆ.

ದಸರಾ ಆಹಾರಮೇಳದಲ್ಲಿ ಭಾಗಿಯಾಗಿರುವ ನಾಗಮ್ಮರವರು ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕಿನ ದೊಡ್ಡಬೆಟ್ಟಗೇರಿ ಗ್ರಾಮದವರಾಗಿದ್ದು, ಚಿಕ್ಕವಯಸ್ಸಿನಿಂದಲೂ ತಮ್ಮ ತಂದೆ–ತಾಯಿಯ ಜೊತೆ ಕಾಡು ಸುತ್ತಲು ಹೋಗಿ ಅನೇಕ ಗಿಡಮೂಲಿಕೆಗಳ, ಸಸ್ಯಗಳ ಪರಿಚಯುವಿದ್ದು ಅವುಗಳ ಪ್ರಯೋಜನವನ್ನು ಮತ್ತು ಅದನ್ನು ಹೇಗೆ ಬಳಸಬೇಕೆಂಬ ವಿಧಿ–ವಿಧಾನಗಳನ್ನು ಅವರ ಮಾತ–ಪಿತೃರವರಿಂದ ಕೇಳಿ, ನೋಡಿ ಕಲಿತಿದ್ದಾರೆ. ಇವರ ಹತ್ತಿರ ಸಣ್ಣ–ಪುಟ್ಟ ಸೋಂಕು ಕಾಯಿಲೆಗಳಿಗೆ, ಅಗತ್ಯ ಸಲಹೆ, ಚಿಕಿತ್ಸೆಯನ್ನೂ ಪಡೆಯಬಹುದಾಗಿದೆ.



ನಾಟಿ ಔಷಧಿ ನಾಗಮ್ಮ

2004ರ ರಾಜ್ಯ ಜಾನಪದ ಪ್ರಶಸ್ತಿ ವಿಜೇತೆ & ಜನಪದ ಗೀತೆಗಳ ಗಾಯಕಿ ನಾಗಮ್ಮ ಬರೀ ಗಾಯಕಿಯಷ್ಟೇಅಲ್ಲ. ತಲಾತಲಾಂತರದಿಂದಲೂ ಗಿಡಮೂಲಿಕೆ ತಜ್ಞೆ. ಇವರು ತಮ್ಮ ಸಮುದಾಯದವರಿಗೆ ಜನ ಸಾಮಾನ್ಯರಿಗೆ ಗಿಡಮೂಲಿಕೆಯ ಔಷಧಿಯನ್ನು ನೀಡುತ್ತಾರೆ. ಯಾವುದೇ ಹಣ ಪಡೆಯದೆ ಉಚಿತ ಚಿಕಿತ್ಸೆ ನೀಡುವ ಇವರ ಬಳಿ ಪ್ರತಿನಿತ್ಯ ಸಾಕಷ್ಟು ಮಂದಿ ಬರುತ್ತಾರೆ. ಕಿವಿನೋವು, ಕಿವಿಸೋರುವುದು, ಹೊಟ್ಟೆನೋವು, ಜ್ವರ, ಕೈಕಾಲು ಉಳುಕು, ಭೇಧಿ, ಹಲ್ಲು ನೋವು, ಇತರ ನೋವು, ಸೋಂಕು ಕಾಯಿಲೆಗಳಿಗೆ ಕಾಡಿನಲ್ಲಿ ಬೆಳಯುವ ಸೊಪ್ಪು & ನಾನಾ ಬೇರುಗಳನ್ನು ಬಳಸಿ ರೋಗಗಳನ್ನು ಗುಣಪಡಿಸುತ್ತಾರೆ.

ಇವರ ಕೈಗುಣ ಹೇಗಿದೆ ಎಂದರೆ ಒಮ್ಮೆ ಇವರ ಬಳಿ ಗಿಡ ಮೂಲಿಕೆ ಔಷಧಿ ಪಡೆದವರಿಗೆ ಮತ್ತೊಮ್ಮೆ ಆ ಸೋಂಕು ಅಥವಾ ನೋವು ಅವರ ಬಳಿ ಸುಳಿಯುವುದಿಲ್ಲ ಎಂಬುದು ಜನರ ಅಭಿಪ್ರಾಯವಾಗಿದೆ. ಇವರು ಕಾಡಿನಿಂದ ಅಗತ್ಯಕ್ಕೆ ತಕ್ಕಂತೆ ಗಿಡಮೂಲಿಕೆಗಳನ್ನು ತಂದು ಜನರಿಗೆ ಎಷ್ಟು ನೀಡಲು ಸಾಧ್ಯವೋ ಅಷ್ಟನ್ನೂ ನೀಡಿ ಗಿಡಮೂಲಿಕೆಗಳು ಬೇಕಾಗಿದ್ದು ಸಿಗದೇ ಇರುವ ಜನರಿಗೆ ಅವರ ಮನೆ ವಿಳಾಸವನ್ನು ಪಡೆದು ಅವುಗಳನ್ನು ತಲುಪಿಸುವರು.

ಇಂತಹ ಸಮಾಜ ಮುಖಿ ಕಾರ್ಯದಲ್ಲಿ ತೊಡಗಿರುವ ನಾಗಮ್ಮನವರು ಕಳೆದ 2 ವರ್ಷಗಳಿಂದ ದಸರಾ ಆಹಾರ ಮೇಳದಲ್ಲಿ ಭಾಗವಹಿಸುತ್ತಿರುವುದು ನಮ್ಮೆಲ್ಲರಿಗೂ ಸಂತಸದ ಸುದ್ದಿ. ಇವರನ್ನು ಆದಿವಾಸಿ ಬುಡಕಟ್ಟು ಸಂಘ ಮತ್ತು ಅರಣ್ಯ ಕಾಡು ಸಂಸ್ಥೆಯ ಮುಖಾಂತರ ಭೇಟಿ ಮಾಡಿ, ದಸರಾ ಆಹಾರ ಮೇಳಕ್ಕೆ ಕರೆತರಲಾಗುತ್ತಿದೆ.

– ಕಿರಣ್.ಆರ್

# ಸರ್ವರನ್ನೂ ಕುಣಿಸಿದ ಯುವ ದಸರಾ

ನಾಡಹಬ್ಬದ ದಸರಾದ ಅಂಗವಾಗಿ ನಡೆಯುವ ಹಲವು ರೀತಿಯ ಕಾರ್ಯಕ್ರಮಗಳಲ್ಲಿ ಯುವ ದಸರಾವು ಪ್ರಮುಖವಾದುದು. ಯುವಕರಿಗೆ ಮುದ ನೀಡಲು ಮತ್ತು ಮನರಂಜನೆಯ ಭಾಗವಾಗಿ ಯುವ ದಸರಾವನ್ನು ಪ್ರತಿ ವರ್ಷವೂ ಆಯೋಜಿಸಲಾಗುತ್ತಿದೆ. ಅದರಂತೆ 2017ರ ಭಾಗವಾಗಿ ಮೈಸೂರು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಮೈಸೂರಿನ ಪ್ರತಿಷ್ಠಿತ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರದರ್ಶನಗೊಂಡಿತು.

ಈ ಬಾರಿ ಹಲವು ವೈಶಿಷ್ಟ್ಯಗಳೊಂದಿಗೆ ಯುವ ದಸರಾ ತನ್ನ ರಂಗನ್ನು ಹೆಚ್ಚಿಸಿಕೊಂಡಿತು.



ಯುವದಸರಾದ ಸಂಗೀತ ಸಂಜೆಯಲ್ಲಿ ನಕ್ಷಝಿಜ್

ಬಾಲಿವುಡ್ ಯೂತ್ಸ್ , ಸ್ಯಾಂಡಲ್‌ವುಡ್ ನೈಟ್ಸ್, ಅರ್ಜುನ್‌ಜನ್ಯ ಸಂಗೀತ ಕಾರ್ಯಕ್ರಮಗಳು, ರೆಡ್‌ಬುಲ್ ಟೂರ್ ಬಸ್ ಇವೆಲ್ಲ ಪ್ರಮುಖ ಆಕರ್ಷಣೆಳಾಗಿದ್ದವು. ಈ ಬಾರಿ ಬಾಲಿವುಡ್ ಯೂತ್ಸ್ ತಂಡದ ಗಾಯಕ ರಾದ ದಿವ್ಯಕುಮಾರ್ ಹಾಗೂ ಶಿಫಾಲಿ ಹಾಡಿನ ಸುರಿಮಳೆ ಸುರಿಸಿದರು. ಆ ದಿನ ಸಂಜೆ ಸುರಿದ ಬಾರಿ ಮಳೆಯನ್ನು ಲೆಕ್ಕಿಸದೆ ಪ್ರೇಕ್ಷಕರು ಹುಚ್ಚೆದ್ದು ಕುಣಿದು ಕುಪ್ಪಳಿಸಿದರು.

ಸ್ಯಾಂಡಲ್‌ವುಡ್ ನೈಟ್ಸ್‌ನ ರಂಗುರಂಗಿನ ಕಾರ್ಯಕ್ರಮ ರಿಚರ್ಡ್ ಲೂಯಿಸ್ ತಂಡದವರಿಂದ ಅರಳಿತು ನೆಗೆಯ ಹೊನಲು. ಲಲನೆಯರ ವೈಯ್ಯಾರದ ನಡಿಗೆ ಯುವ ದಸರಾ ಸಾಂಸ್ಕೃತಿಕ ವೈಭವವನ್ನು ಹಿಮ್ಮಡಿಗೊಳಿಸಿತು. ಗುರುವಾರ ನಗರದ ಮಹಾರಾಜ ಕಾಲೇಜಿನ ಮೈದಾನದಲ್ಲಿ ನೆರೆದಿದ್ದ ಯುವ ಜನತೆಗೆ ಸ್ಯಾಂಡಲ್‌ವುಡ್ ನೈಟ್ಸ್ ತಂಡ ಭರ್ಜರಿ ರಂಜನೆ ನೀಡಿತು. ಹುಡುಗ–ಹುಡುಗಿಯೆಂಬ ಭೇದಭಾವವಿಲ್ಲದೆ ಶಿಳ್ಳೆ–ಚಪ್ಪಾಳೆ ಹೊಡೆದು ಸಂಭ್ರಮಿಸಿದರು. ಇಂದಿನ ಕಾರ್ಯಕ್ರಮದ ಆಕರ್ಷಣಯಾಗಿದ್ದ Action Prince ಧೃವಸರ್ಜ ಅವರನ್ನು ಕಾಣಲು ಸಾವಿರಾರು ಜನ ನೆರೆದಿದ್ದರು. ನೃತ್ಯದ ಮೂಲಕ ವೇದಿಕೆಗೆ ಬಂದ ಧೃವಸರ್ಜ ದಸರಾ ಹಬ್ಬದ ಶುಭಾಷಯ ಹೇಳಿ ಭರ್ಜರಿ ಸಿನಿಮಾದ ಡೈಲಾಕ್ ಹೇಳಿ ಗಮನ ಸೆಳೆದರು. ಮತ್ತೋರ್ವ ಖ್ಯಾತ ನಟ ಶ್ರೀ ಮುರುಳಿ ಹಾಡು ಹಾಡಿ ರಂಜಿಸಿದರು. ಈ ಎಲ್ಲಾ ಕಾರ್ಯಕ್ರಮವನ್ನು ಅನುಶ್ರೀ ಮೋಹಕವಾಗಿ ನಿರೂಪಿಸಿದರು.

ರಂಗಿತರಂಗ ಚಿತ್ರದ ನಟಿ ರಾಧಿಕಾ ಚೇತನ್ ಜನಪದ ಶಾಸ್ತ್ರೀಯ ಪಾಶ್ಚಿಮಾತ್ಯ ಸಂಗೀತಕ್ಕೆ ಮೋಹಕವಾಗಿ ನೃತ್ಯ ಪ್ರದರ್ಶಿಸಿದರು.. ಯೂಟರ್ನ್ ಚಿತ್ರದ ನಾಯಕಿ ಶ್ರದ್ಧಾ ಶ್ರೀನಾಥ್ ಅವರ ನೃತ್ಯ ಯುವಕರೆದೆಗೆ ಕಿಚ್ಚು ಹಚ್ಚಿತು. ಬೆಂಗಳೂರಿನ ಪಾಲ್ಗುಣಿ ಡ್ರೀಮ್ಸ್ ಈವೆಂಟ್ಸ್‌ನ ಲಲನೆಯರು ವಧುವಿನಂತೆ ಸಿಂಗಾರಗೊಂಡು ಮಾರ್ಜಾಲ ನಡಿಗೆಯಿಂದ ಗಮನ ಸೆಳೆದರು.

ಅಂತರಾಷ್ಟ್ರೀಯ ಖ್ಯಾತಿಯ ಕಂಸಾಳೆ ಮಹದೇವಯ್ಯ ಕಲಾ ಸಂಘದ ಕಲಾವಿದರು' ಸಾಂಪ್ರದಾಯಿಕ ಉಡುಗೆಯೊಂದಿಗೆ ಮಹದೇಶ್ವರನ ಕುರಿತಾದ ಜನಪದ ಗೀತೆಗಳಿಗೆ ಬೀಸು ಕಂಸಾಳೆ ಪ್ರದರ್ಶಿಸಿ ಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾದರು. ಮೈಸೂರಿನ ಲಕ್ಷ್ಮಿದೇವಮ್ಮ ಡ್ಯಾನ್ಸ್ ಅಕಾಡೆಮಿ, ಕಲರ್ಸ್ ಡ್ಯಾನ್ಸ್ ಅಕಾಡೆಮಿ ಕಲಾವಿದರ ತಂಡ ಸೇರಿದಂತೆ ಅನೇಕ ಕಾಲೇಜು ವಿದ್ಯಾರ್ಥಿಗಳು ಆಕರ್ಷಕ ನೃತ್ಯ ಪ್ರದರ್ಶಿಸಿ ಯುವ ದಸರಾ ಸಂಭ್ರಮವನ್ನು ಹೆಚ್ಚಿಸಲು ಕಾರಣರಾದರು.

ಅದ್ದೂರಿ ಅಂತಿಮ ದಿನದ ಯುವ ದಸರಾ ಯುವ ದಸರೆಗೆ ಈ ವರ್ಷ ಭಾರಿ ಮಳೆಯು ಕೊಂಚ ಬಿಟ್ಟುಬಿಡದೆ ತೊಂದರೆ ನೀಡಿತು. ಆದರೆ ಕೊನೆಯ ದಿನ ಮಳೆಯು ಸಹ ಬಿಡುವು ನೀಡಿತು. ಸ್ಯಾಂಡಲ್‌ವುಡ್‌ನ ಕಲಾವಿದರಾದ ಶೃತಿ ಹರಿಹರನ್, ಹರ್ಷಿಕಾ ಪೂಣಚ್ಚ, ಐಂದ್ರಿತಾ ರೈ, ರಾಗಿಣಿ ದ್ವಿವೇದಿ, ಸೃಜನ್ ಲೋಕೇಶ್, ಪ್ರಣಿತ, ದಿಗಂತ್, ಆದಿತ್ಯ, ಸಾದುಕೋಕಿಲ ಭಾಗವಹಿಸಿ ಯುವ ಜನತೆಯ ಕಣ್ಮನ ಸೆಳೆದರು.

ಈ ಕಾರ್ಯಕ್ರಮದಲ್ಲಿ ಕೇಂದ್ರ ಬಿಂದುವಾಗಿ ಸ್ಯಾಂಡಲ್‌ವುಡ್‌ನ ಚಾಲೆಂಜಿಗ್ ಸ್ಟಾರ್ ದರ್ಶನ್ ಭಾಗವಹಿಸಿ ಕಾರ್ಯಕ್ರಮದ ವೈಭವವನ್ನು ಮತ್ತಷ್ಟೂ ಮೆರಗುಗೊಳಿಸಿದರು. ತಮ್ಮದೆ ಆದ ಶೈಲಿಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಭಿಮಾನಿಗಳ ಮನ ಸೆಳೆದರು.

> ನಮ್ಮ ಕಾಲೇಜಿನಿಂದ ದಸರಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಒಂದು ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಯಿತು. ದಸರಾ ಕಾರ್ಯಕ್ರಮವಾದ ಯುವಕರ ಪ್ರತಿಭೆಯನ್ನು ಪ್ರದರ್ಶಿಸಲು "ಯುವ ದಸರಾ" ಎಂಬ ಕಾರ್ಯಕ್ರಮವನ್ನು ದಸರಾ ಸಂದರ್ಭದಲ್ಲಿ ಸಾಂಸ್ಕೃತಿಕ ನಗರಿಯಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದಕ್ಕೆ ಸಂತೋಷವಾಯಿತು.
>
> –ಪ್ರೀತಿ ಬಿಳಿಕೆರೆ
>
> ಸ.ಮ.ಕಾಲೇಜು ಹುಣಸೂರು

– ಅಂಜಲಿ.ಕೆ, ಸಂಜಯ್, ನಂದಿನಿ

**ಪುಟವಿನ್ಯಾಸ:** ಸೋಮಶೇಖರ್.ಎಂ
**ಛಾಯಾಚಿತ್ರ:** ಸೋಮಶೇಖರ್.ಎಂ ಅನಿಲ್.ಎ.ಎಸ್
**ಸಂಪಾದಕರು:** ಕಿರಣ್‌ಕುಮಾರ್.ಆರ್, ಚಂದ್ರಕಲಾ ಚಂದ್ರಶೇಖರ್.ಬಿ,ಎನ್ ಅಂಜಲಿ.ಕೆ ಅನಿಲ್.ಎ.ಎಸ್ ಚಂದ್ರಶೇಖರ್.ಕೆ,ಎನ್

# ನಾನು ಜೊತೆಗೆ ನಮ್ಮವರು..!!

ಪವನ್ ಕುಮಾರ್ ಎಲ್.ಪಿ.

ಎಲ್ಲರಿಗು ನನ್ನ ನಮಸ್ಕಾರಗಳು. ಹೇಗಿದ್ದೀರ ನೀವು? ಚೆನ್ನಾಗಿದ್ದೀರ ಅಂತ ಭಾವಿಸಿದ್ದೇನೆ. ನಾನಂತೂ ತುಂಬಾ ಆರಾಮವಾಗಿದ್ದೇನೆ. ಯಾರಪ್ಪ ಇವ್ನು ಎಲ್ಲೋ ಪರಿಚಿತ ವ್ಯಕ್ತಿ ಈತ ಅಂತ ಅನ್ಕೊಳ್ತಾ ಇದೀರ? ಹೌದೌದು ನಾನು ನಮ್ಮ ಅಂಬಾರಿ ಆನೆ ಅರ್ಜುನ. ಇಲ್ಲಿವರೆಗೂ ನಾಡಿನ ಅಧಿದೇವತೆಯ ಆಶೀರ್ವಾದದಿಂದ ೪ ಬಾರಿ ಯಶಸ್ವಿಯಾಗಿ ತಾಯಿ ಚಾಮುಂಡಿಯನ್ನು ಹೊತ್ತು ಸಾಗಿದ್ದೇನೆ. ದಸರೆಗೆ ಆಗಮಿಸುವ ಗಜಪಡೆಗೆ ನಾನೆ ಕ್ಯಾಪ್ಟನ್. ಈ ಬಾರಿ ೧೫ ಆನೆಗಳೊಂದಿಗೆ ನಾನು ಆಗಮಿಸಿದ್ದೇನೆ.



ನನಗೀಗ ೫೭ ವರ್ಷ ಇಲ್ಲಿರುವ ಆನೆಗಳಲ್ಲೇ ನಾನು ಅತೀ ಬಲಶಾಲಿ. ಅಂತರಸಂತೆ ವಲಯದ ಬಳ್ಳೆ ಶಿಬಿರ ನನ್ನ ವಾಸ ಸ್ಥಾನ. ನನಗೆ ಯಾವುದೆ ರೀತಿಯ ತೊಂದರೆ ಆಗದಂತೆ ಮಾವುತರಾದ ವಿನು ಮತ್ತು ಸಣ್ಣಪ್ಪ ನನ್ನನ್ನು ನೋಡಿಕೊಳ್ಳುತಿದ್ದಾರೆ. ಅಂದಹಾಗೆ ಈ ಬಾರಿ ನಾನು ಮತ್ತು ನಮ್ಮವರು ೧೫ ಮಂದಿ ಬಂದಿದ್ದೇವೆ. ಇವತ್ತು ನಿಮ್ಗೆ ನಮ್ಮ ಟೀಮನ್ನ ಪರಿಚಯ ಮಾಡಿಕೊಡ್ತೀನ.

೧.ಮೊದಲನೆಯದಾಗಿ ದಸರಾ ಆನೆಗಳಿಗೆ ಅಣ್ಣನ ಹಾಗಿರುವ ಈತ ನನ್ನಂತೆ ತುಂಟ ಸ್ವಭಾವದವನಲ್ಲ. ಇವನದು ಸತತ ೨೦ ವರ್ಷಗಳಿಂದಲೂ ಸಹ ದಸರೆಯಲ್ಲಿ ಪಾಲ್ಗೊಳ್ಳುತಿದ್ದಾನೆ. ಅಲ್ಲದೆ ದ್ರೋಣ ಆನೆಯ ನಂತರ ಸತತ ೧೪ ವರ್ಷಗಳ ಕಾಲ ಅಂಬಾರಿಯನ್ನು ಹೊತ್ತಿದ್ದಾನೆ. ಇವನೇ ನಮ್ಮ ಅಣ್ಣ 'ಬಲರಾಮ' ೬೦ ವರ್ಷ ಪ್ರಾಯದವ. ನಿಶಾನೆ ಆನೆಯಾಗಿ ಈತನ ಕರ್ತವ್ಯ. ಪ್ರಸ್ತುತ ಮತ್ತಿಗೋಡು ಶಿಬಿರದಲ್ಲಿ ಈತನ ವಾಸ. ಮಾವುತರಾದ ತಿಮ್ಮ ಮತ್ತು

೨.ಮತ್ತೊರ್ವನೆಂದರೆ ೫೧ವರ್ಷ ಪ್ರಾಯದ 'ಅಭಿಮನ್ಯು'. ನಮ್ಮೆಲ್ಲರಿಗಿಂತಲೂ ಹೆಚ್ಚಿನ ಪ್ರಖ್ಯಾತಿ ಇವನದ್ದು. ಪುಂಡಾನೆಯನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಈತ ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲೆ ಫೇಮಸ್. ಸದ್ಯ ಮತ್ತಿಗೋಡು ಕ್ಯಾಂಪ್‌ನಲ್ಲಿರುವ ಅಭಿಮನ್ಯುವನ್ನು ಮಾವುತ ವಸಂತ ಹಾಗು ಕಾವಾಡಿ ರಾಜು ನೋಡಿಕೊಳ್ಳುತಿದ್ದಾರೆ. ನನ್ನಂತೆ ಈತನೂ ಸಹ ಮಾವುತನನ್ನು ಹೊರತುಪಡಿಸಿ ಮತ್ತಾರನ್ನು ತನ್ನ ಹತ್ತಿರಕ್ಕೆ ಸೇರಿಸಲಾರ.

೩.ಮತ್ತೊಬ್ಬ 'ಭೀಮ'. ಹೆಸರಿಗೆ ತಕ್ಕಂತೆ ಇದ್ದಾನೆ ಕೂಡ.ಇವನು ನಮ್ಮಂತೆ ಅಲ್ಲ. ಹಿಂದೊಮ್ಮೆ ತಾಯಿಯಿಂದ ಬೇರೆಯಾಗಿ ಹಸುಗಳೊಂದಿಗೆ ಊರು ಸೇರಿದ್ದ. ಆಗಿನ್ನು ೨ವರ್ಷದ ಎಳೆ ಕಂದಮ್ಮ ಈತ. ನಂತರ ಹಾಲುಣಿಸಿ ಈತನ್ನು ಬೆಳೆಸಲಾಯಿತು. ನಮ್ಮೆಲ್ಲರಿಗಿಂತ ಕಿರಿಯ ವಯಸ್ಕ ಈತ. ಬರೀ ೧೭ವರ್ಷದವನು. ನನ್ನ ನಂತರ ಭವಿಷ್ಯದ ಅಂಬಾರಿ ಆನೆ ಎಂದು ಹೇಳಬಹುದಾದ ಆಕಾರ ಇವನದು. ಅಲ್ಲದೇ ಇದೇ ಮೊದಲ ಬಾರಿಗೆ ದಸರೆಯಲ್ಲಿ ಪಾಲ್ಗೊಂಡಿದ್ದು, ಮತ್ತಿಗೋಡು ಆನೆ ಶಿಬಿರದಲ್ಲಿ ಮಾವುತರಾದ ರಾಧಾಕೃಷ್ಣ ಮತ್ತು ಕಾವಾಡಿ ರಾಜುರವರೊಂದಿಗೆ ಬೆಳೆಯುತ್ತಿದ್ದಾನೆ.

೪. ವಿಜಯ ಆನೆ ೬೦ ವರ್ಷ ಪ್ರಾಯದ ಹೆಣ್ಣಾನೆ. ಅಂಬಾರಿ ಹೊತ್ತು ಸಾಗುವಾಗ ಕುಮ್ಕಿ ಆನೆಯಾಗಿ ನನ್ನ ಜೊತೆಗೆ ಹೆಜ್ಜೆಹಾಕುವ ನನ್ನ ಒಡನಾಡಿಇವಳು. ಬಲರಾಮಣ್ಣನಂತೆ ಈಕೆಯದು ಸೌಮ್ಯ ಸ್ವಭಾವ. ೯ ವರ್ಷದಿಂದ ದಸರೆಯಲ್ಲಿ ಪಾಲ್ಗೊಳ್ಳುತಿದ್ದು ಮಾವುತರಾದ ಬೋಜಪ್ಪ ಮತ್ತು ಕಾವಡಿ ಅಣ್ಣಯ್ಯ ಈಕೆಯನ್ನು ನೋಡಿಕೊಳ್ಳುತಿದ್ದಾರೆ.

೧೨.ದುಬಾರೆ ಆನೆ ಶಿಬಿರದಿಂದ ಬಂದಿರುವ ಮತ್ತೋರ್ವ ಗೆಳೆಯನೆಂದರೆ 'ಗೋಪಿ'. ೭ನೇ ಬಾರಿ ದಸರೆಯಲ್ಲಿ ಪಾಲ್ಗೊಳ್ಳುತಿದ್ದಾನೆ. ೩೫ ವರ್ಷದವ, ಮಾವುತ ಸರಿ ಕಾವಾಡಿ ಅಪ್ಪಯ್ಯ ಇದನ್ನು ನೋಡಿಕೊಳ್ಳುತ್ತಿದ್ದಾರೆ.

೧೩.ದುಬಾರೆಯಿಂದ ಆಗಮಿಸಿರುವ ಮತ್ತೋರ್ವ ಆಪ್ತಮಿತ್ರ 'ಪ್ರಶಾಂತ'. ೬೧ವರ್ಷದ ಹಿರಿಯ. ೧೧ನೇ ಬಾರಿ ದಸರೆಯಲ್ಲಿ ಪಾಲ್ಗೊಳ್ಳುತ್ತಿದ್ದಾನೆ, ನನ್ನಂತೆಯೇ ಈತನೂ ಬಲಿಷ್ಠ. ಮಾವುತ ಚಿನ್ನಪ್ಪ , ಕಾವಾಡಿ ರಾಜುರವರ ಪಾಲನೆಯಲ್ಲಿ ಬೆಳೆಯಿತ್ತಿದ್ದಾನೆ.೧೪.ತಂಡದ ಕೊನೆಯ ಸದಸ್ಯ 'ಹರ್ಷ'. ಬರೋಬ್ಬರಿ ೫೦ ವರ್ಷ. ನನ್ನ ತಮ್ಮನಂತೆ. ೧೫ವರ್ಷದಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. ಮಾವುತ ಚಿಕ್ಕ ಮತ್ತು ಕಾವಾಡಿ ಅಶೋಕ್ ಅವರೊಂದಿಗೆ ದುಬಾರೆಯಲ್ಲಿ ಇವನ ವಾಸ. ಇದು ನನ್ನ ತಂಡ. ನಮ್ಮೆಲ್ಲರನ್ನು ತುಂಬಾ ಆತ್ಮೀಯವಾಗಿ ಮತ್ತು ಅಷ್ಟೇ ಕಾಳಜಿಯಿಂದ ನೋಡಿಕೊಳ್ಳುತ್ತಾರೆ. ನಮ್ಮನ್ನು ಸಲಹುವ ಮಾವುತರಿಗಂತೂ ಅವರ ಹಿರಿಯ ಮಕ್ಕಳಂತೆ ನಾವು. ಅವರು ಹಸಿದಿದ್ದರೂ, ನಮ್ಮ ಹೊಟ್ಟೆ ತುಂಬಿದ ನಂತರವಷ್ಟೇ ಅವರ ಊಟ. ನಮಗೆ ಸ್ನಾನ ಮಾಡಿಸಿದ ಬಳಿಕವೇ ಅವರ ಮತ್ತು ಅವರ ಮಕ್ಕಳ ಸ್ನಾನ. ಹೀಗೆ ನಮಗೆ ಕಿಂಚಿತ್ತೂ ತೊಂದರೆ ಆಗದಂತೆ ನಮ್ಮನ್ನು ನೋಡಿಕೊಳ್ಳುತ್ತಾರೆ. ತಾಯಿ ಆಶೀರ್ವಾದದೊಂದಿಗೆ ಈ ಬಾರಿಯೂ ಯಾವುದೇ ಅಡ್ಡಿ ಆತಂಕಗಳಿಲ್ಲದೆ. ಜಂಬೂಸವಾರಿಯನ್ನು ನಡೆಸುವ ಆತ್ಮವಿಶ್ವಾಸ ನಮ್ಮದು. ಇದೇ ಈ ಬಾರಿ ದಸರೆಗೆ ಆಗಮಿಸಿರುವ 'ನಾನು ಮತ್ತು ನಮ್ಮವರು....!!

## ಹಾಡಿ ಮಕ್ಕಳ ಅಚ್ಚು ಮೆಚ್ಚಿನ ಟೆಂಟ್ ಶಾಲೆ

ಮೈಸೂರು: ನಗದಾದ್ಯಂತದಸರೆ ಕಳೆಕಟ್ಟಿದೆ. ಈ ಬೆನ್ನಲ್ಲೇ ನಾಡಹಬ್ಬಕ್ಕೆ ಆಗಮಿಸಿರುವ ಮಾವುತ ಮತ್ತು ಕಾವಾಡಿಗಳ ಮಕ್ಕಳಿಗಾಗಿ ಶಿಕ್ಷಣ ಇಲಾಖೆಯ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಕೂಡಟೆಂಟ್ ಶಾಲೆಯನ್ನು ನಿರ್ಮಿಸಲಾಗಿದೆ. ಮಾವುತರೊಂದಿಗೆ ಆಗಮಿಸುವ ಅವರ ಮಕ್ಕಳ ಶಿಕ್ಷಣಾಭ್ಯಾಸಕ್ಕೆ ಯಾವುದೇತೊಂದರೆ ಆಗದಂತೆಅರಮನೆಆವರಣದಲ್ಲೇ 'ಟೆಂಟ್ ಶಾಲೆ'ಯನ್ನು ತೆರೆಯಲಾಗಿದೆ.



ಈ ಕುರಿತಂತೆ 'ಟೆಂಟ್‌ಶಾಲೆ'ಯ ಮುಖ್ಯಸ್ಥ ನೂರ್ ಫಾತಿಮಾರವರು ಮಾತನಾಡಿ, ಮಕ್ಕಳು ತುಂಬಾ ಮುಗ್ದ ಮನಸ್ಸಿನವರು. ಹೇಳಿದ ಮಾತನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಪಠ್ಯಕ್ಕಿಂತ ಪಠ್ಯೇತರಚಟುವಟಿಕೆಯಲ್ಲಿ ಹೆಚ್ಚು ಕ್ರಿಯಾತ್ಮಕರಾಗಿದ್ದಾರೆ ಮತ್ತು ಅಷ್ಟೇ ಬುದ್ಧಿಶಾಲಿಗಳೂ ಕೂಡಎಂದು ನುಡಿದರು. ಶಿಕ್ಷಕಿ ಅಕ್ಕಮ್ಮ ಮಾತನಾಡಿ, ನಮ್ಮೊಂದಿಗೆ ಮಕ್ಕಳು ತುಂಬಾಚೆನ್ನಾಗಿ ಹೊಂದಿಕೊಂಡಿದ್ದಾರೆ. ಅವರು ನಿರ್ಧಿಷ್ಟ ವೇಳೆಗೆ ಬರುವುದಿಲ್ಲವಾದರೂ ಕೂಡ ಒಮ್ಮೆ ಶಾಲೆಯೊಳಕ್ಕೆ ಸೇರಿದರೆ ನಾವು ಹೇಳುವವರೆಗೂ ನಮ್ಮೊಂದಿಗೆ ಇರುತ್ತಾರೆ ಎಂದರು. ಅಲ್ಲದೆ ಮಕ್ಕಳಿಗೆ ಅಲ್ಲಿಯಂತೆ ಇಲ್ಲಿಯೂಕೂಡ 'ಬಿಸಿಯೂಟ'ವನ್ನೇ ನೀಡಲಾಗುತ್ತದೆ. ಮಕ್ಕಳೂ ಸಹ ಯಾವುದೇ ರೀತಿಯ ತೊಂದರೆ ನೀಡದರೆ ಪಾಠ-ಪ್ರವಚನಗಳಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂದು ಹೇಳಿದರು.

## ಮಕ್ಕಳ ದಸರಾಕ್ಕೆ ನಾವ್‌ರೆಡಿ...

**ನರೇಂದ್ರ ಡಿ.:ಮೈಸೂರು:** ಲೇಲೇ ಪಾಡಿ... ಲೇಲೆ ಪಾಡಿ..ಎಂದು ಹಾಡುತ್ತ ಕುಣಿಯುತ್ತಾ ಮಕ್ಕಳು ನೃತ್ಯಾಭ್ಯಾಸದಲ್ಲಿ ತೊಡಗಿದ್ದರು. ಈ ದೃಶ್ಯ ಕಂಡುಬಂದದ್ದು ಮೈಸೂರು ಅರಮನೆ ಆವರಣದಟೆಂಟ್ ಶಾಲೆಯಲ್ಲಿ . ಜಗನ್ಮೋಹನ ಅರಮನೆಯಲ್ಲಿ ನಡೆಯಲಿರುವ ಮಕ್ಕಳ ದಸರೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರದರ್ಶಿಸಲಿರುವ ನೃತಾಭಾಸ್ಯದಲ್ಲಿ ವಿದ್ಯಾರ್ಥಿಗಳು ತೊಡಗಿಕೊಂಡಿದ್ದರು. ಶಿಕ್ಷಕರಾದ ಅಕ್ಕಮ್ಮ ಮತ್ತು ದಯಾನಂದ್ ರವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನಡಲಾಗಿತ್ತಿದ್ದು, ಯಾವ ವೃತ್ತಿಪರ ನೃತ್ಯಪಟುವಿಗಿಂತಲೂ ಕಡಿಮೆ ಇಲ್ಲ ಎಂಬಂತೆ ವಿದ್ಯಾರ್ಥಿಗಳು ನೃತ್ಯ ಮಾಡಲಿದ್ದಾರೆ. ಅಲ್ಲದೆ ಈ ಕುರಿತು ದಯಾನಂದ್ ರವರು ಮಾತನಾಡಿ, ಮಕ್ಕಳಿಗೆ ಅವರಿಷ್ಟದ ಹಾಡನ್ನೇ.. ಆರಿಸಿಕೊಳ್ಳಲಾಗಿದೆ.

**ಬಂದಾ! ಬಂದಾ! ಕಿಂದರಿಜೋಗಿ:** ವ್‌ಯಾರಿಗೂ ಕಮ್ಮಿ ಇಲ್ಲ ಎಂಬಂತೆ ಹಾಡಿಯ ಹುಡುಗರು ಕಿಂದರಿಜೋಗಿ ನಾಟಕ ಪ್ರದರ್ಶನಕ್ಕಾಗಿ, ಮತ್ತೊಂದೆಡೆ ಭರ್ಜರಿ ತಯಾರಿ ನಡೆಸುತ್ತಿದ್ದರು. ಮಕ್ಕಳ ದಸರೆಯಲ್ಲಿ ಸಂಭ್ರಮಿಸಲು ಇದು ನಮಗೆ ಉತ್ತಮ ಅವಕಾಶ. ನಮ್ಮ ತಂದೆ ತಾಯಿಯರೊಂದಿಗೆ ನಾವು ಸಹ ಆಗಮಿಸಿ ಸಂಭ್ರಮಿಸುತ್ತೇವೆ ಎಂದು ಟೆಂಟ್ ಶಾಲೆಯ ವಿದ್ಯಾರ್ಥಿಗಳು ಮಾತನಾಡಿದರು. ತಿತಿಮತಿಯಿಂದ ಆಗಮಿಸಿರುವ ವಿದ್ಯಾರ್ಥಿಗಳಾದ ಸಂಗೀತ ಮತ್ತು ದೀಕ್ಷಾ ಮಾತನಾಡಿ, ಇದೇ ಮೊದಲ ಬಾರಿಗೆದಸರಾಗೆ ಆಗಮಿಸಿದ್ದೇವೆ. ನಮ್ಮ ಪಾಠ-ಪ್ರವಚನಗಳಿಗೆ ಯಾವುದೇ ತೊಂದರೆ ಆಗದಂತೆ ನೋಡಿಕಮೊಳ್ಳುತ್ತಿದ್ದಾರೆ. ಒಟ್ಟಾರೆಯಾಗಿ 'ಮಕ್ಕಳ ದಸರಾಗೆ ನಾವ್‌ರೆಡಿ' ಎಂದುಟೆಂಟ್ ಶಾಲೆಯ ವಿದ್ಯಾರ್ಥಿಗಳು ಸಂಭ್ರಮಿಸುತ್ತಿದ್ದಾರೆ.

# ದಸರೆಯಲ್ಲಿ ಪಾಲ್ಗೊಳ್ಳುವುದೇ ಒಂದು ಪುಣ್ಯ: ಏಡುಕೊಂಡಲು

ದಸರೆಯ ಪ್ರಮುಖ ಆಕರ್ಷಣೆಯ ಕೇಂದ್ರ ಬಿಂದು ಆನೆಗಳು. ಹಿಂದೆಂದಿಗಿಂತಲೂ ಈ ಬಾರಿ ಹೆಚ್ಚಿನ ಅಂದರೆ ೧೫ ಆನೆಗಳನ್ನು ಕರೆಸಲಾಗಿದೆ. ಅದಷ್ಟೇ ಅಲ್ಲದೆ ಈ ಆನೆಗಳ ಉಸ್ತುವಾರಿಯನ್ನು ಖುದ್ದು ಜಿಲ್ಲಾ ಅರಣ್ಯ ಅಧಿಕಾರಿಗಳಾದ "ಏಡುಕೊಂಡಲು"ರವರು ವಹಿಸಿಕೊಂಡಿದ್ದಾರೆ. ಈ ಕುರಿತಂತೆ ಅವರೊಂದಿಗೆ ನಮ್ಮ ತಂಡದ ಪ್ರತಿನಿಧಿಗಳು ನಡೆಸಿದ ಸಂದರ್ಶನ ಇದಾಗಿದೆ.



**ಪ್ರಶ್ನೆ: ನಮಸ್ತೇ ಸರ್. ಆನೆಗಳ ನೇತೃತ್ವವನ್ನು ವಹಿಸಿರುವ ತಮಗಿದು ಮೊದಲ ದಸರ ಈ ಖುರಿತು ನಮ್ಮ ಅಭಿಪ್ರಾಯವೇನು?**

ಡಿ.ಎಫ್.ಒ.: ದಸರಾದಲ್ಲಿ ಭಾಗವಹಿಸುವುದೇ ಒಂದು ಅದೃಷ್ಟ. ಸಾಕಷ್ಟು ಜನ ಮಾತನಾಡುತ್ತಾ ಹೇಳುತ್ತಾರೆ ಪುಣ್ಯ ಮಾಡಿದವರಿಗೆ ಮಾತ್ರಾ ಈ ಅವಕಾಶ ಅಂತ ಅಂತಹುದೆ ಭಾಗ್ಯ ನನ್ನದಿರಬಹುದು. ಮೊದಲಾ ಬಾರಿಯಾಗಿರುವುದರಿಂದ ಹೊಸ ಹುಮ್ಮಸ್ಸಿನೊಂದಿಗೆ ಕೆಲಸ ಮಾಡುತ್ತಿದ್ದೇವೆ,

**ಪ್ರಶ್ನೆ: ವೈಯಕ್ತಿಕವಾಗಿ ಆನೆಗಳ ಮೇಲಿನ ತಮ್ಮ ಒಲವಿನ ಕುರಿತು ಏನು ಹೇಳಲಿಚ್ಚಿಸುತ್ತೀರಾ?**

ಡಿ.ಎಫ್.ಒ.: ಸಾಕಷ್ಟು ವರ್ಷಗಳಿಂದಲೂ ಸಹ ಆನೆಗಳ ಕುರಿತು ನನಗೆ ವಿಶೇಶ ಆಸಕ್ತಿ ಇದೆ. ಆನೆ ನೋಡಲು ದೈತ್ಯ ದೇಹಿ ಆದರೆ ಮನುಷ್ಯನೊಂದಿಗೆ ಸ್ಪಂದಿಸುವ ಒಳ್ಳೆಯ ಸ್ವಭಾವ ಅದಕ್ಕಿದೆ. ಆನೆಗಳಿಂದ ಸಾಕಷ್ಟು ಉಪಯೋಗವಿದೆ. ಅರಣ್ಯದಲ್ಲಿ ಸಮತೋಲನ ಕಾಪಾಡುವಲ್ಲಿಯೂ ಆನೆಯ ಪಾತ್ರ ಮಹತ್ವದ್ದು. ಹಾಗಾಗಿ ಈ ಕುರಿತಂತೆ "ಗಜ ಹಂಟ್" ಎಂಬ ಸಾಕ್ಷ್ಯ ಚಿತ್ರವನ್ನೂ ಕೂಡ ಹೊರ ತಂದಿದ್ದೇವೆ.

**ಪ್ರಶ್ನೆ: ಜಂಬೂಸವಾರಿಯಲ್ಲಿ ಅಂಬಾರಿ ಆನೆಯ ಪಕ್ಕ ಕುಮ್ಕಿ ಆನೆಗಳನ್ನು ನಲ್ಲಿಸುವ ಉದ್ದೇಶ?**

ಡಿ.ಎಫ್.ಒ.: ಆನೆ ಒಂದು ಸಮಾಜಮುಖಿ ಪ್ರಾಣಿ. ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ನೋಡುವುದು ಮತ್ತು ಹೆಚ್ಚಿನ ಶಬ್ಧ ಅದರ ಕಿವಿಗೆ ಬಿದ್ದಾಗ ಭಯಗೊಳ್ಳದಂತೆ ಅದಕ್ಕೆ ಆಧಾರವಾಗಿ ಹಾಗು ರಕ್ಷಣಾತ್ಮಕ ಭಾವ ಸೃಷ್ಠಿಸುವ ಸಲುವಾಗಿ ಎರಡೂ ಬದಿ ಆನೆಗಳನ್ನು ನಲ್ಲಿಸಲಾಗುತ್ತದೆ.

**ಪ್ರಶ್ನೆ: ಕುಮ್ಕಿ ಆನೆಯಾಗಿ ಹೆಣ್ಣಾನೆಯನ್ನೆ ಬಳಸುವ ಉದ್ದೇಶ?**

ಡಿ.ಎಫ್.ಒ.: ಎರಡೂ ಗಂಡಾನೆಗಳನ್ನೆ ನಲ್ಲಿಸದರೆ ಅವು ತಾಳ್ಮೆ ಕಳೆದುಕೊಳ್ಳುವ ಮತ್ತು ಪರಸ್ಪರ ತಳ್ಳಾಡುವ ಸಾಧ್ಯತೆ ಹೆಚ್ಚು. ಆದರೆ ಹೆಣ್ಣಾನೆಯೊಂದಿಗೆ ಒಂದು ರೀತಿಯ ಮೃದು ಭಾವ ಆನೆಗಿರುತ್ತದೆ ಮತ್ತು ರಾಜಘಾಂಭೀರ್ಯದಿಂದ ಹೆಜ್ಜೆ ಹಾಕುತ್ತದೆ.

**ಪ್ರಶ್ನೆ: ಜಂಬೂಸವಾರಿಯ ದಿನ ಆನೆಯ ಮೇಲೆ ಸುಮಾರು ಸಾವಿರ ಕೆ.ಜಿ.ಯಷ್ಟು ತೂಕ ಇರುತ್ತದೆ ಇದು ಆನೆಗೆ ಹೊರೆಯಾಗುವುದಿಲ್ಲವೇ?**

ಡಿ.ಎಫ್.ಒ.: ಇದು ನಿಜಕ್ಕೂ ಗಂಭೀರ ವಿಚಾರ. ಆದರೆ ೫೦೦೦-೫೫೦೦ಕೆ.ಜಿ. ತೂಗುವ ಆನೆಗೆ ಇದು ಭಾರವೇ ಅಲ್ಲ. ಕಾಡಿನಲ್ಲಿ ದೈತ್ಯ ಮರದ ದಿಮ್ಮಿಗಳನ್ನು ಹೊತ್ತು ಸಾಗುವ ಆನೆಗೆ ಇದು ಅಸಾಧ್ಯದ ಕೆಲಸವಲ್ಲ. ಆದ್ದರಿಂದಲೇ ಅಂಬಾರಿ ಆನೆಗೆ ವಿಶೇಷ ತಾಲೀಮು ನೀಡುದರ ಜೊತೆಗೆ ಅತ್ಯಂತ ಹೆಚ್ಚಿನ ಪೌಷ್ಠಕಾಂಶ ಭರಿತ ಆಹಾರವನ್ನು ದಿನಕ್ಕೆರಡು ಬಾರಿ ನೀಡಲಾಗುತ್ತದೆ. ಆದ್ದರಿಂದ ಸಾವಿರ ಕೆ.ಜಿ.ಯ ತೂಕ ಅತಿಯಾದುದಲ್ಲ.

**ಪ್ರಶ್ನೆ: ಅಂಬಾರಿ ಹೊರುವ ಆನೆಗೆ ವಿಶೇಷ ಲಕ್ಷಣಗಳೇನಾದರು ಇರಬೇಕೆ?**

ಡಿ.ಎಫ್.ಒ.: ಹೌದು ಅಂಬಾರಿ ಹೊರುವ ಆನೆ ಕನಷ್ಠ ೫೦೦೦ ಕೆ.ಜಿ. ತೂಕ ಹೊಂದಿರಬೇಕು. ಬೆನ್ನು ಸಮತಟ್ಟಾಗಿರಬೇಕು. ೧೫ ಅಡಿಯ ಕನಷ್ಠ ಎತ್ತರ ಹೊಂದಿರಬೇಕು.ಉದ್ದ ೩.೫೭ ಮೀಟರಿನಷ್ಟಿರಬೇಕು. ಮತ್ತು ಉತ್ತಮ ಮೈಕಟ್ಟನ್ನು ಹೊಂದಿರಬೇಕು.

**ಪ್ರಶ್ನೆ: ದಸರೆಗೆ ಆಗಮಿಸುವ ಆನೆಗಳಿಗೆ ವಿಶೇಷ ಸೌಲಭ್ಯಗಳೇನಾದರು ಇದೆಯೇ?**

ಡಿ.ಎಫ್.ಒ. ಖಂಡಿತವಾಗಿಯೂ ಇದೆ ಈ ಆನೆಗಳ ರಕ್ಷಣೆಗಾಗಿಯೆ ೧ ಕೋಟಿ ರುಪಾಯಿಯ ಜೀವ ವಿಮೆಯನ್ನೂ ಕೂಡ ಮಾಡಿಸಲಾಗಿದೆ.

**ಪ್ರಶ್ನೆ: ತಮ್ಮ ಪ್ರಕಾರ ಭವಿಷ್ಯದ ಅಂಬಾರಿ ಯಾವಿದಿರಬಹುದು?**

ಡಿ.ಎಫ್.ಒ.: ವೈಯಕ್ತಿಕವಾಗಿ ಅರ್ಜುನನ ನಂತರ "ಅಭಿಮನ್ಯು" ಆನೆ ಅಥವಾ "ಭೀಮ" ಆನೆ ಅಂಬಾರಿಯ ಕರ್ತವ್ಯವನ್ನು ಸಮರ್ಥವಾಗಿ ನಭಾಯಿಸುವ ಸಾಮರ್ಥ್ಯ ಹೊಂದಿದೆ.

## ಆರೋಗ್ಯಕ್ಕಾಗಿ ಆಯುಷ್...ಜ್ಞಾನ ವೃಧ್ಧಿಗಾಗಿ ಗ್ರಂಥಾಲಯ..

**ನರೇಂದ್ರ ಡಿ. ಮೈಸೂರು**

ನಗರದೆಲ್ಲೆಡೆಯುದಸರೆಯ ಸಂಭ್ರಮ ಮನೆ ಮಾಡುತ್ತಿದೆ. ಇದರ ಭಾಗವಾಗಿದಸರೆಗೆ ಆಗಮಿಸಿರುವ ಮಾವುತ, ಕಾವಾಡಿ, ಮಾವುತರ ಕುಟುಂಬದ ಆರೋಗ್ಯಕ್ಕಾಗಿ ಜಿಲ್ಲಾ ಪಂಚಾಯತ್ ಮೈಸೂರು ಮತ್ತು ಆರೋಗ್ಯ ಇಲಾಖೆಯು ಒಟ್ಟಾಗಿ 'ಆಯುಷ್' ಒಂದಾಗಿ ಅವರ ಆರೋಗ್ಯ ರಕ್ಷಣೆಯ ಹೊಣೆ ಹೊತ್ತುಕೊಂಡಿದೆ. ಈ ಕುರಿತು ಮಾತನಾಡಿದ ನಿಯೋಜಿತ ವೈದ್ಯಾಧಿಕಾರಿಗಳು ಕಾಡಿನಲ್ಲೇ ಬಹುಕಾಲ ಕಳೆಯುವ ಇವರಿಗೆ ನಗರ ಪ್ರದೇಶಕ್ಕೆ ಹೊಂದಿಕೊಳ್ಳಲು ಕೊಂಡ ಸಮಯ ಬೇಕಾಗುತ್ತದೆ.

ಬಹು ಮು ವಾತಾವರಣದಲಿ ಅವರಿಗೆ ಮೈ-ಕೈ ನೋವು ಮತ್ತು ಉದರ ಸಂಬಂಧಿ ಸಮಸ್ಯೆಗಳು ಹೆಚ್ಚಾಗಿರುತ್ತದೆ.

ಅವರು ಯಾವುದೇ ಔಷಧಿಗಳಿಗಿಂತಲೂ ಆಯುರ್ವೆದ ಔಷಧಿಗಾಗಿಯೇ ಬೇಡಿಕೆ ಇಡುತ್ತಾರೆ. ಹೀಗಾಗಿ ಆಯುಷ್ ಇಲಾಖೆ ಇದರ ಹೊಣೆ ಹೊತ್ತುಕೊಂಡಿದೆ ಎಂದು ನುಡಿದರು.

ಜ್ಞಾನ ವೃದ್ಧಿಗಾಗಿ ಗ್ರಂಥಾಲಯ ಸೇವೆ: ಮಕ್ಕಳಿಗಾಗಿ 'ಸಾರ್ವಜನಕ ಗ್ರಂಥಾಲಯ' ಇಲಾಖೆ ಅರಮನೆ ಅಂಗಳದಲ್ಲಿ 'ಟೆಂಟ್ ಗ್ರಂಥಾಲಯ'ವನ್ನು ಸಹ ಆರಂಭಿಸಿದೆ. ಸಾಕಷ್ಟು ಪುಸ್ತಕ ಸೌಲಭ್ಯವನ್ನುಸಹ ಇಲ್ಲಿ ಒದಗಿಸಲಾಗಿದೆ.

# ನಮ್ಮ ಕಣ್ಣಿಗೆ ಕಂಡದ್ದು



ಮಹಿಷ ಮಂಡಲದಲ್ಲಿ ನಗೆಯ ಸಂಭ್ರಮ



ಮಜ್ಜನದಲ್ಲಿ ಮಿಂದ ಅರ್ಜುನ



ಇರುಳಲ್ಲಿ ರಂಜಿಸಲು ಹಗಲು ತರಬೇತಿ



ಕಲಾವಿದರ ಕಲರವಕ್ಕೆ ಗಡಿಯಾರ ಸಾಕ್ಷಿ

**ಸಂಪಾದಕರು–ಡಾ.ಎಂ.ಎಸ್. ಸಪ್ನ**

**ಚಿತ್ರ ಕೃಪೆ– ಜಿ.ಎಂ. ಮೋಹನ್,**

# ವಿಶೇಷ ಚೇತನರ ಕವಿಗೋಷ್ಠಿ ಕಲರವ




ಜಗದ್ವಿಖ್ಯಾತ ಮೈಸೂರು ದಸರಾದ ಅಂಗವಾಗಿಜಗನ್ಮೋಹನ ಅರಮನೆಯಲ್ಲಿ ಆಯೋಜಿಸಲಾಗಿದ್ದ "ವಿಶಿಷ್ಟ ಕವಿಗೋಷ್ಠಿ"ಯು ನಿಜವಾಗಲೂ ವಿಶಿಷ್ಟತೆಗಳಿಂದ ಕೂಡಿತ್ತು. ಈ ಕವಿಗೋಷ್ಠಿಯಲ್ಲಿ ವೃದ್ಧಾಶ್ರಮದ ಹಿರಿಯರು, ಮಂಗಳಮುಖಿಯರು, ವಿಶೇಷ ಚೇತನರು, ಅನಾಥಶ್ರಮದ ಮಕ್ಕಳು ಇನ್ನ ತರರು ತಮ್ಮ ಕವನಗಳ ಮೂಲಕ ಅವರ ಭಾವನೆಗಳನ್ನು ವ್ಯಕ್ತಪಡಿಸಲು ಅತ್ಯುತ್ತಮವಾದ ವೇದಿಕೆಯನ್ನುಕಲ್ಪಿಸಲಾಗಿತ್ತು.

ಈ ಗೋಷ್ಠಿಯಲ್ಲಿ ೬ ವರ್ಷದ ಪುಟ್ಟಮಕ್ಕಳಿಂದ ಹಿಡಿದು ೬೦ ವರ್ಷದ ಹಿರಿಯರತನಕ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ಕವಿತೆ ವಾಚನ ಮಾಡಿದರು.ವೃದ್ಧಾಶ್ರಮದಿಂದ ಬಂದಿದ್ದಂತಹ **ಇಂದಿರಮ್ಮ** ಎಂಬ ಕವಯಿತ್ರಿಯು ತಮ್ಮ ಕವಿತೆಯ ಮೂಲಕ ಹೆಣ್ಣಿಗೆ ಕೊಡಬೇಕಾದ ಸ್ಥಾನ-ಮಾನ ಮತ್ತು ಗೌರವದ ಬಗೆಗೆ ಅದ್ಭುತವಾಗಿ ವಿವರಿಸಿದರು.ನಮ್ಮ ಇಂದಿನ ಸಮಾಜದಲ್ಲಿ ವಯಸ್ಸಾದ ತಂದೆ-ತಾಯಿಯನ್ನು ಮಕ್ಕಳು ಕರುಣೆಯಿಲ್ಲದೇ ವೃದ್ಧಾಶ್ರಮಕ್ಕೆ ಅಟ್ಟಲಾಗುತ್ತಿದೆ. ಪೋಷಕರು ಮತ್ತು ಮಕ್ಕಳ ನಡುವಣ ಸಂಬಂಧ ಏನೂ? ಎಂದು ಪ್ರಶ್ನೆ ಎತ್ತಿದ್ದರು.

ಅದೇರೀತಿ ಮಂಗಳಮುಖಿ ಸಮುದಾಯದಿಂದ ಆಗಮಿಸಿದ್ದ ಪ್ರಣತಿ ಪ್ರಕಾಶ್, ತಮ್ಮ ಸಮುದಾಯದವರು ಈ ಸಮಾಜದಲ್ಲಿ ಯಾವರೀತಿಯ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ ?ಸಮಾಜ ನಮ್ಮನ್ನು ಯಾವ ದೃಷ್ಠಿಯಿಂದ ನೋಡುತ್ತಿದೆ ಎಂಬುದನ್ನು ಕವಿತೆಯ ಮೂಲಕ ವಿವರಿಸಿದರು.

**"ಕಣ್ಣಲ್ಲಿಕಣ್ಣಿಟ್ಟು ನೋಡಬಾರದೇ,**
**ನಮ್ಮ ಹಾಗೇ ನಾವು ಮನುಜರಲ್ಲವೇ?**
**ಏಕೆ ಇಂತಹ ಕೀಳು ಭಾವನೆ ನಮ್ಮ ಮೇಲೆ ನಮಗೆ.ಗಂಡಾಗಿ ನಾ ಹುಟ್ಟಿದೆ,ಹೆಣ್ಣಾಗಿ ನಾ ಬೆಳೆದೆ ಏನು ಮಾಡಲಿ ಆ ಬ್ರಹ್ಮ ಬರೆದನಂತೆಯೋ ಈ ಜನ್ಮ"**

ಎಂದುಕವಿತೆ ವಾಚನ ಮಾಡುತ್ತಾ ಎಲ್ಲರ ಮನಸ್ಸಿನೊಳಗೂ ಭಾವ ತುಂಬಿದರು.ಮಂಗಳಮುಖಿಯರ ಸಮುದಾಯದಲ್ಲೂ ಸಹ ಹಲವಾರು ಪ್ರತಿಭಾವಂತರಿದ್ದಾರೆ.ಈ ಸಮುದಾಯಕ್ಕೆ ಸಮಾಜದಲ್ಲಿ ಸಿಗಬೇಕಾದ ಅವಕಾಶಗಳು ಸಿಕ್ಕರೇ, ಅವರು ಸಹ ಸಾಧಿಸಿ ತೋರಿಸುತ್ತಾರೆ. ಎಂಬ ಪ್ರಜ್ಞೆಯನ್ನು ಮೂಡಿಸಿದರು.ಇದೇ ರೀತಿ ವಿಶೇಷ ಚೇತನರಾದ ಬೇಬಿ, ದಿವ್ಯಾಂಗಚೇತನರಾದಎಸ್.ಬಾಬು ಮತ್ತಿತ್ತರರು ತಮ್ಮ ಕವಿತೆಗಳ ಪ್ರತಿಭೆಯನ್ನು ಪ್ರದರ್ಶಿಸಿದ್ದು,ನಿಜವಾಗಿಯೂ ಒಂದು ಮಹತ್ವದ ಕ್ಷಣವಾ ಗಿತ್ತು.ಒಟ್ಟಾರೆಯಾಗಿ ಈ ಕಾರ್ಯಕ್ರಮ ಯಾವುದೇ ಭೇದ- ಭಾವವಿಲ್ಲದೇ ಯಶಸ್ವಿಯಾಯಿತು. – **ರೌಷಾನ್ ಆರಾ**

# ವೈವಿಧ್ಯತೆಯನ್ನು ಸಾರುವ ಬೊಂಬೆ ದಸರಾ



ಕಲಾಮಂದಿರದಲ್ಲಿ ದಸರ ಅಂಗವಾಗಿ ಗೊಂಬೆಗಳನ್ನು ಪ್ರದರ್ಶಿಸಲಾಯಿತು. ಶ್ರೀಮತಿ ಗಾಯತ್ರಿಶಂಕರ್ ರವರು ಕೂರಿಸಿದ್ದ ಗೊಂಬೆಗಳು ಇಡೀ ದಸರಾದ ಚಿತ್ರಣವನ್ನು ಅಲ್ಲದೆ ಅನೇಕ ನೀತಿಕಥೆ, ಪುರಾಣ, ಕಣ್ಮರೆಯಾಗುತ್ತಿರುವ ದೇಶಿಯ ಆಟಗಳು ಒಳಗೊಂಡಂತೆ ಅಲ್ಲದೆ ಭಾರತೀಯ ಹಬ್ಬಗಳು, ಆಚಾರ-ವಿಚಾರ ಹಾಗೂ ರಾಮಾಯಣ, ಮಹಾಭಾರತದಂತಹ ಪುರಾಣಕಥೆಗಳನ್ನು ಸಾರುವ ಬೊಂಬೆಗಳನ್ನು ಕೂರಿಸಲಾಗಿತ್ತು. ಜನರು ಮನೆಗಳಲ್ಲಿ ಹೆಚ್ಚು ಬಂದು ವೀಕ್ಷಿಸುವುದಿಲ್ಲ. ಆದ್ದರಿಂದ ಸುಮಾರು ವರ್ಷಗಳಿಂದ ಬೊಂಬೆ **ದಸರಾ ಸಮಿತಿ ಆರ್ಟ್‌ಗ್ಯಾಲರಿಯಲ್ಲಿ** ಕೂರಿಸಲು ಅವಕಾಶ ನೀಡಿದ್ದಾರೆ. ಇವರು ಸುಮಾರು ಒಂದು ವರ್ಷಕ್ಕೆ ೧೫-೨೦ ಸಾವಿರ ರೂಪಾಯಿಗಳನ್ನು ಬೊಂಬೆಗಳಿಗೆ ಖರ್ಚು ಮಾಡಿ ಸುಮಾರು ಸಾವಿರಕ್ಕೂ ಹೆಚ್ಚು ಬೊಂಬೆಗಳನ್ನು ಪ್ರದರ್ಶಿಸುತ್ತಾರೆ.

**ನಾಡ ಗೊಂಬೆಗಳಿಂದ ಕಂಗೊಳಿಸಿದ ವಿದೇಶಿ ಗೊಂಬೆಗಳು**

ಸರಸ್ವತಿಪುರಂನ ನಿವಾಸಿ ನಾಗಪ್ರಸಾದ್‌ರವರ ಮನೆಯಲ್ಲಿ ನಾಡಗೊಂಬೆಗಳೊಂದಿಗೆ ಅಮೇರಿಕಾ, ಸ್ವಿಡ್ಜರ್‌ಲ್ಯಾಂಡ್ , ಇಟಲಿ, ಚೀನಾ ಸೇರಿದಂತೆ ಅನೇಕ ದೇಶಗಳ ಗೊಂಬೆಗಳನ್ನು ಇವರು ಪ್ರದರ್ಶಿಸಿದರು. ೧೩ ವರ್ಷಗಳಿಂದ ಗೊಂಬೆ ಕೂರಿಸುತ್ತಿರುವ ಇವರು ಕಾಫಿತೋಟದ ವ್ಯಾಪಾರಿ. ತಮಿಳುನಾಡು, ಚನ್ನಪಟ್ಟಣ ಮತ್ತು ಹೋದ ಸ್ಥಳಗಳಿಂದ ಗೊಂಬೆ ಖರೀದಿಸುತ್ತಾರೆ. ಸುಮಾರು ಒಂದು ವರ್ಷಕ್ಕೆ ಇವರು ಬೊಂಬೆಗಾಗಿ ೩೦-೪೦ ಸಾವಿರ ಪ್ರತಿವರ್ಷಖರ್ಚು ಮಾಡುತ್ತಾರೆ.ಒಂದು ತಿಂಗಳ ಮುಂಚಿತವಾಗಿಯೇ ಸಿದ್ಧತೆ ನಡೆಸುತ್ತಾರೆ.ಗಣೇಶ, ಸುಬ್ರಹ್ಮಣ್ಯ, ವಿಷ್ಣು ದೇವಿಯರು ಮತ್ತು ಮಕ್ಕಳ ಗೊಂಬೆಗಳಿಗೂ ಇವರು ಅವಕಾಶ ನೀಡಿದ್ದಾರೆ.

**ಪುರಾಣ ಕತೆಗಳನ್ನು ಸಾರುವ ಗೊಂಬೆಮನೆ**

ಕುವೆಂಪು ನಗರದಸೇತುರಾಮ್ ಎಂಬ ಸಾಹಿತಿಗಳ ಮನೆಯಲ್ಲಿತಿರುಪತಿ, ಚಾಮುಂಡಿಯ ವಿವಿಧ ಅವತಾರಗಳು , ಶ್ರೀ ಕೃಷ್ಣಲೀಲೆಗಳು, ದಸರ ವೈಭವ, ಅಷ್ಟ ಲಕ್ಷ್ಮಿಯರು, ವಿಷ್ಣು ಪುರಾಣ ಹೀಗೆ ವಿವಿಧ ಪುರಾಣ ಕತೆಗಳನ್ನು ಸಾರುವ ಬೊಂಬೆಗಳನ್ನು ಪ್ರದರ್ಶಿಸಲಾಯಿತು.

"ಪ್ರತಿ ಮನೆಗಳಲ್ಲಿ ಮದುವೆಯ ಸಂದರ್ಭದಲ್ಲಿ ರಾಜ ಮತ್ತುರಾಣಿ ಗೊಂಬೆಗಳನ್ನು ಕೊಡುವುದು ವಾಡಿಕೆ. ದಸರ ಸಮಯದಲ್ಲಿ ಅವುಗಳನ್ನು ರಾಜನ ನೆನಪಿಗಾಗಿ ಮತ್ತು ಹಿರಿಯರನ್ನು ನೆನಪಿಸುವ ಸಲುವಾಗಿ ಗೊಂಬೆಗಳನ್ನು ಕೂರಿಸಲಾಗುತ್ತದೆ ಇದೊಂದು ಹಿಂದಿನಿಂದ ಬಂದ ಪರಂಪರೆ.

ಸುಮಾರು ೭ ವರ್ಷಗಳಿಂದ ಗೊಂಬೆಗಳನ್ನು ಕೂರಿಸುತ್ತಿದ್ದೇವೆ. ಅನೇಕ ಬಹುಮಾನಗಳು ಕೂಡ ಬಂದಿವೆ. ಜನರು ಬಂದು ವೀಕ್ಷಿಸುವುದೇ ನಮಗೆ ಖುಷಿತರುತ್ತದೆ

– **ಸುನೀಲ್**

# ಕಂಡರು ಕಾಣದಂತೆ ನಡೆದು ಹೋದ ಪುಸ್ತಕ ಮೇಳ



ದಸರಾದ ಅಂಗವಾಗಿ ಸಾಂಸ್ಕೃತಿಕ ನಗರಿಯಲ್ಲಿ ದಸರಾ ಉಪಸಮಿತಿಯು ಹಲವಾರು ಮನರಂಜನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ಯುವಜನತೆ ಮತ್ತು ಬರುವ ಪ್ರವಾಸಿಗರ ಗಮನ ಸೆಳೆಯಲು ಮನರಂಜನೆ ನೀಡುವುದು ಹಾಗೂ ನಮ್ಮ ನಾಡಿನ ಸಂಸ್ಕೃತಿಯನ್ನು ಜನಸಾಮಾನ್ಯರಿಗೆ ತಿಳಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು.ಆದರೆ ಇಲ್ಲೊಂದು ಕಾರ್ಯ ಕ್ರಮವು ಅದ್ದೂರಿಯಾಗಿ ನಡೆದರೂ ನಡೆಯ ದಂತೆ ನಡೆದದ್ದು ಬೇಜಾರಾಗುವ ಸಂಗತಿಯೇ ಹೌದು,ಅಂತಹ ಕಾರ್ಯಕ್ರಮ ಯಾವುದೆಂದು ಕೇಳುವಿರಾ? ಅದೇ ನಮ್ಮ ರಾಷ್ಟ್ರಕವಿಗಳಾದ ಕುವೆಂಪು, ದ.ರಾ.ಬೇಂದ್ರೆ, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಹಾಗೂ ಹಲವಾರು ಸಾಹಿತಿಗಳ ಪ್ರಕೃತಿ, ನಾಡು, ನುಡಿ, ಜೀವನ, ಗಿರಿ-ವನಗಳ ಕುರಿತಾದ ಹಾಗೂ ವೈಚಾರಿಕತೆ ಮೂಡಿಸುವ ಬಹು ಸುಂದರ ಕಥೆ,ಕವನಗಳ, "ಕನ್ನಡ ಪುಸ್ತಕ ಕೋಶವನ್ನೇ" ಒಳಗೊಂಡಿದ್ದ ಮೈಸೂರಿನ ಕಾಡ ಕಛೇರಿಯ ಮೈದಾನದಲ್ಲಿ ಆಯೋಜಿಸಿದ್ದ "ಪುಸ್ತಕಮೇಳ"."ನೋಡಿ ಸ್ವಾಮಿ ನನಗಂತೂ ತಿಳಿಯಲಿಲ್ಲ ನಮ್ಮ ಜನಕ್ಕೆ ಅದೇನಾಗಿದೆಯೋ" ಅಷ್ಟೊಂದು ಸುಂದರವಾದ ಮಹತ್ವವುಳ್ಳ ಕಥೆ,ಕವನ, ಸಾಹಿತ್ಯವನ್ನು ಪರಿಚಯಿಸಿ ಕೊಳ್ಳಲೂ ಅಲ್ಲಿಗೆ ಬಂದವರ ಸಂಖ್ಯೆ ಎಣಿಕೆ ಮಾಡಲಾಗದಷ್ಟು ಕಡಿಮೆ. ಯಾಕೆ ಹೀಗಾಯಿತು ಎಂದು ವಿಚಾರಿಸತೊಡಗಿದರೆ ಅಲ್ಲಿಯವರು ಹೇಳುತ್ತಾರೆ,ಆಯೋಜನೆ ಮಾಡಿರುವ ಸ್ಥಳವೇ ಸೂಕ್ತವಾದುದಲ್ಲ ಎಂದು ಇದಕ್ಕೆ ಕಾರಣ ಯಾರು? ಎಂದು ತಿಳಿಯುತ್ತಾ ಹೋದರೆ ಯಾವ ಕಾರಣಕ್ಕಾಗಿ ಈ ಪುಸ್ತಕ ಮೇಳ ನಡೆಸ ಬೇಕಾಯಿತು ಎಂದೆನಸುತ್ತದೆ. ಕರ್ನಾಟಕದಲ್ಲಿ ಪುಸ್ತಕ ಓದುಗರೇ ಇಲ್ಲವೇ ಅಥವಾ ಪುಸ್ತಕ ಮೇಳ ಏರ್ಪಡಿಸಿರುವುದೆ ತಿಳಿದಿಲ್ಲವೋ ಎಂದೂ ಅಲ್ಲಿದ್ದ ವ್ಯಾಪಾರಿಗರನ್ನು ಕೇಳಿದರೆ ಅವರು ಹೇಳುತ್ತಾರೆ,"ಸರಿಯಾದ ರೀತಿಯಲ್ಲಿ ಎಲ್ಲಾ ಜನರಿಗೆ ತಲುಪುವಷ್ಟರ ಮಟ್ಟಿಗೆ ಪ್ರಚಾರ ಮಾಡಿಲ್ಲ ಎಂದು" ಹಾಗಾದರೆ ಉಪಸಮಿತಿಯಲ್ಲೇ ನ್ಯೂನತೆ ಇದೆಯೋ ಹಾಗೂ ಇದನ್ನು ತಿಳಿದು ತಿಳಿಯದಂತೆ ಜನರೇ ಸ್ಪಂದಿಸುತ್ತಿಲ್ಲವಾ? ಎಂಬ ಆಘಾತವಾದ ಪ್ರಶ್ನೆಯು ಕಾಡಿದೆ.ಮತ್ತೊಂದು ಪ್ರಮುಖವಾದ ವಿಚಾರವೇನೆಂದರೆ ಇಂದಿನ ಯುವ ಜನತೆಯು ಆಧುನಿಕತೆಗೆ ಮಾರುಹೋಗಿ ಹೊಸ ತಂತ್ರಜ್ಞಾನಕ್ಕೆ ಅವಲಂಬಿತರಾಗಿದ್ದಾರೆ. ಅದರಲ್ಲಿ ಮೊಬೈಲ್ ಬಳಕೆಯಂತೂ ಎತ್ತೇಚ್ಚವಾಗಿ ಬಳಕೆ ಮಾಡುತ್ತಿರುವುದು ಒಂದು ವಿಷಾದನೀಯ ಸಂಗತಿ.ಏಕೆ ನಮ್ಮ ಯುವಜನತೆ ಪುಸ್ತಕಗಳನ್ನು ಕೊಂಡು ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಈ ವಿಷಯವನ್ನು ಕೇಳಿದರೆ ನಾವು ಪ್ರತಿಯೊಂದು ವಿಷಯವನ್ನು ಇಂಟರ್‌ನೆಟ್ ಮುಖಾಂತರವೇ ತಿಳಿದುಕೊಳ್ಳುವುದಾಗಿ ಹೇಳುತ್ತಾರೆ. ಹೌದು ಅದಕ್ಕಾಗಿಯೇ ಈ ಮುಖಾಂತರವಾದರೂ ಪುಸ್ತಕಗಳನ್ನು ಓದಲಿ ಎಂಬ ಉದ್ದೇಶವನ್ನು ಇಟ್ಟುಕೊಂಡು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯು **"ಕಣಜ"** ಎಂಬ ಮೊಬೈಲ್ ಆಪ್ ಒಂದನ್ನು ಬಿಡುಗಡೆ ಮಾಡಿದೆ.ಇದನ್ನು ಹೆಚ್ಚು ಸದುಪಯೋಗಪಡಿಸಿಕೊಳ್ಳಬೇಕೆಂದು ಸಚಿವೆ- ಉಮಾಶ್ರೀಯವರು ಪುಸ್ತಕ ಮೇಳದ ಉದ್ಘಾಟನೆಯಲ್ಲಿ ಹೇಳಿದ್ದುಂಟು.

– **ಚಂದ್ರಶೇಖರ್.ಬಿ.ಎನ್.**



ಎಂಟೂ ದಿನದ ಮುಂಚಿತವಾಗಿ ಬಂದಿದ್ದೇವೆ , ಮೈಸೂರು ಅದ್ಭುತವಾದ ನಗರದ ದಸರಾದ ಪ್ರಯುಕ್ತ ಏರ್ಪಡಿಸಿದ ನಾನಾ ಬಗೆಯ ಕಾರ್ಯಕ್ರಮಗಳನ್ನು ನೋಡಲು ಬಂದಿದ್ದೇವೆ, ದಸರಾದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿಯನ್ನು ನೋಡಲು ಕಾತುರರಾಗಿದ್ದೇವೆ .

**–ಬ್ಯಾರಿ,ಕಿಯಾನ್**: ನೇಪಾಳ್



ಮೈಸೂರು ಒಂದು ಸಾಂಸ್ಕೃತಿಕ ನಗರಿ ಮತ್ತು ಪ್ರವಾಸಿಗರ ತಾಣ, ಇಲ್ಲಿಒಳ್ಳೆಯ ಆದಾಯ ಬರುವಕಾರಣ, ಅದ್ದೂರಿದಸರಾ ಮಾಡುವುದರಿಂದ ಪ್ರವಾಸಿಗರಿಗೆ ಹೆಚ್ಚು ಆಕರ್ಷಣಿಯ ವಾಗಿರುತ್ತದೆ, ಮತ್ತೆ ಮತ್ತೆ ಬರಬೇಕು ಎಂಬ ಹಂಬಲ ಹೆಚ್ಚಾಗುತ್ತದೆ. ಮಳೆಯ ಕಾರಣದಿಂದ ಹೆಚ್ಚು ಸ್ಥಳಗಳನ್ನು ನೋಡಲು ಸ್ವಲ್ಪ ತೊಂದರೆಯಾದರೂ ಕೂಡ ಎಲ್ಲಾ ಸ್ಥಳಗಳಿಗೂ ಹೋಗುತ್ತಿದ್ದೇವೆ ಏಕೆಂದರೆ ದಸರಾ ವರ್ಷಕ್ಕೆಒಮ್ಮೆಬರುವುದು.

**ಗಿರಿಜಾ ಮಾಲತಿ, ಬೆಂಗಳೂರು**




ದಸರಾ ಬಗ್ಗೆ ಕೇಳಿದ್ದೆ ಆದರೇ ನೋಡಿ ರಲಿಲ್ಲಾ, ದಸರಾ ನೋಡುವ ಸಲುವಾಗಿ ಮೊದಲಬಾರಿ ಮೈಸೂರಿಗೆ ಬಂದಿದ್ದೆನೆ, ಸ್ತಬ್ಧಚಿತ್ರಗಳು ಈ ನಾಡಿನ ಸಂಸ್ಕೃತಿಯನ್ನು ತಿಳಿ ಸುತ್ತದೆ ಎಂಬ ವಿಚಾರ ಕೇಳಿದ್ದೇವೆ ಈ ಭಾರಿ ನೋಡು ತ್ತಿರುವುದು ಖುಷಿಯಾಗಿದೆ. ಇಲ್ಲಿ ಎಲ್ಲಾ ಕಡೆ ಸಂಭ್ರಮ ಸಡಗರ ತುಂಬಿದ್ದೆ ಮತ್ತುರಾತ್ರಿ ವೇಳೆ ಮೈಸೂರಿನ ದೀಪಾಲಂಕಾರ ನೋಡಲುಎರಡುಕಣ್ಣು ಸಾಲಾದು ಬಹಳ ಸುಂದರವಾಗಿರುತ್ತದೆ.

ನಾವು ಇದೇ ಮೊದಲ ಬಾರಿಗೆದಸರಾ ನೋಡಲು ಬಂದ್ದಿದ್ದೇವೆ ಈಗಾಗಲೇ ಚಾಮೂಂಡಿ ಬೆಟ್ಟ, ಮೃಗಾಲಯ ನೋಡಿದೆವು, ಚಾಮುಂಡಿ ತಾಯಿದರ್ಶನ ಮಾಡಿ ಬಹಳ ಖುಷಿಯಾಗಿದೆ ಈಗ ಅರಮನೆ ನೋಡಿಕೊಂಡುಕೆ.ಆರ್.ಎಸ್. ಅಣೆಕಟ್ಟು ನೋಡಲು ಹೋಗುತ್ತೇವೆ

-**ನಾರಾಯಣಿ ಅಯ್ಯರ್**, ತಮಿಳುನಾಡು

**–ಕುಮಾರ & ಕನ್ಯಾಕುಮಾರಿ**

ಸಂಪಾದಕರು: ಕನ್ಯಾಕುಮಾರಿ.ಎಂ, ರೌಷನ್ ಆರಾ, ಕುಮಾರ್, ಶಾಂತರಾಜು.

ಪುಟ ವಿನ್ಯಾಸಗಾರರು: ಕನ್ಯಾಕುಮಾರಿ.ಎಂ, ರೌಷನ್ ಆರಾ.

ವರದಿಗಾರರು: ಸುನೀಲ್, ಶಾಂತರಾಜು, ರೌಷನ್ ಆರಾ

ಛಾಯಾಗ್ರಾಹಕರು: ಕುಮಾರ್, ಕನ್ಯಾಕುಮಾರಿ.ಎಂ

# ಪ್ರೇಕ್ಷಕರ ಮನಗೆದ್ದ ಪಂಜಿನಕವಾಯಿತು

## ಜನಮನ ಗೆದ್ದ ಯೋಧರ ಮತ್ತು ಪೋಲೀಸರ ಸಾಹಸದ ದೃಶ್ಯಗಳು

ವಿಶ್ವ ವಿಖ್ಯಾತ ಮೈಸೂರು ದಸರೆಗೆ ಅಭೂತಪೂರ್ವ ತೆರೆಯು ಪಂಜಿನಕವಾಯಿತು ಮೂಲಕ ಬಿದ್ದಿತ್ತು, ಜಂಬೂ ಸವಾರಿಯ ಸಂಜೆ ಬನ್ನಿಮಂಟಪದ ಮೈದಾನದಲ್ಲಿ ಆಕರ್ಷಕವಾದ ಸಾಹಸ ಕ್ರೀಡೆಗಳು ಜನರ ಮೈ ಜುಮ್ ಎನ್ನುವ ಅನುಭವ ನೀಡಿತು.

ಅಂದು ಜಂಬೂಸವಾರಿಯ ರಾತ್ರಿ ಚುಮು ಚುಮು ಚಳಿಯಲ್ಲಿ ಲಕ್ಷಾಂತರ ಪ್ರೇಕ್ಷಕರು ಬಹಳ ಉತ್ಸಾಹದಿಂದ ಕಾದು ಕುಳಿತ್ತಿದ್ದರು ನೋಡುಗರ ಆಸೆಯನ್ನು ಇಮ್ಮಡಿಗೊಳಿಸಲು ಕರ್ನಾಟಕ ಪೋಲೀಸ್ ಶಿಕ್ಷಣಾರ್ಥಿಗಳು, ಯೋಧರು ಮುಂತಾದ ತಂಡಗಳು ಸಾಹಸ ಕ್ರೀಡೆಗಳಾದ ಪಂಜಿನ ಕವಾಯಿತು ಟಾರ್ನೆಡೊ ಮಿಲಿಟರಿ ಪಡೆ, ನಡೆಸಿಕೊಟ್ಟ ಹೇಡನ್‌ಕ್ರಾಸ್, ಸುದರ್ಶನಚಕ್ರ, ಕಾರ್ನರ್‌ಕ್ರಾಸ್,ಸ್ಕೂಟರ್‌ನಲ್ಲಿ ಯೋಗಬಂಗಿ, ಪೇಪರ್‌ಓದುತ್ತ ಬೈಕ್ ಚಾಲನೆ, ಬೆಂಕಿಯ ಬೃಹತ್ ವೃತ್ತದೊಳಗೆ ಬೈಕ್ ಜಿಗಿತವನ್ನು ಪ್ರದರ್ಶಿಸಿದರು.

**ಎದೆಝಲ್ ಎನಿಸಿದ ಟೆಂಟ್ ಪೆಗ್ಗಿಂಗ್:** ಪೋಲೀಸ್ ಅಶ್ವದಳವು ನಡೆಸಿಕೊಟ್ಟ ಟೆಂಟ್ ಪಂಗ್ಗಿಗ್ ಪ್ರದರ್ಶನವಂತೂ ನೋಡುಗರನ್ನು ಒಂದು ಕ್ಷಣ ಬೆಚ್ಚಿ ಬೀಳಿಸಿತು. ಈ ಕ್ರೀಡೆಯು ಭೂಮಿಯಲ್ಲಿನೆಟ್ಟಿರುವ ಬೆಂಕಿಯಗೂಟವನ್ನು ಕುದುರೆಯ ಮೇಲೆ ಕುಳಿತ ಸವಾರನು ತನ್ನ ಕೈಯಲ್ಲಿ ಇರುವ ಈಟಿಯ ಸಹಾಯದಿಂದ ಬೆಂಕಿಯ ಗೂಟಕ್ಕೆ ಚುಚ್ಚಿ ಮೇಲಕ್ಕೆ ಎತ್ತುವುದೇ ಆಗಿದೆ.



*ಪಂಜಿನಕಾವಯಿತು ಪ್ರದರ್ಶಿಸುತ್ತಿರುವ ಪೋಲಿಸ್ ಸಿಬ್ಬಂದಿಗಳು*

**ಪಂಜಿನಕವಾಯಿತುವಿನಲ್ಲಿ ಅರಳಿದ ಕಲೆ:** ಮೈಸೂರನ್ನು ಪ್ರತಿನಿಧಿಸುವ ಮತ್ತೊಂದು ಆರ್ಕಷಣೆಯೆಂದರೆ ಪೋಲಿಸ್ ಶಿಕ್ಷಣಾರ್ಥಿಗಳು ನೆರವೇರಿದ ಪಂಜಿನಕವಾಯಿತಿನ ಪ್ರದರ್ಶನ. ಕತ್ತಲಿನ ಆಕಾಶದಲ್ಲಿ ಬಿಳಿಯ ನಕ್ಷತ್ರದಂತೆ ಇವರುಗಳೂ ಶ್ವೇತ ವಸ್ತ್ರಧರಿಸಿ ಕೈಯಲ್ಲಿ ಪಂಜನ್ನು ಹಿಡಿದು ಆಗಮಿಸಿ ಸುಸ್ವಾಗತ, ವೆಲ್ ಕಂ ಟು ಆಲ್,ಕರ್ನಾಟಕ ಪೋಲೀಸ್,ಹ್ಯಾಪಿದಸರಾ, ಜೈ ಚಾಮುಂಡೇಶ್ವರಿ, ಸಿ ಯು ಇನ್ 2018, ಥಾಂಕ್‌ಯು ಮತ್ತು ಜೈ ಹಿಂದ್ ಎಂಬ ಅಕ್ಷರಗಳ ಆಕೃತಿಗಳು ಮೂಡಿದವು.

**ಆಕರ್ಷಕ ಶಿಸ್ತಿನ ಪರೇಡ್:** ಪಂಜಿನ ಕವಾಯಿತುವನಲ್ಲಿ ಪರೇಡ್ ಬಹಳ ಆಕರ್ಷಕವಾಗಿತ್ತು ಈ ಪರೇಡ್‌ನಲ್ಲಿ ಅಶ್ವದಳ ತುಕಡಿ, ನಗರ ಶಸಸ್ತ್ರ ಮೀಸಲು ಪಡೆ, ಗೃಹ ರಕ್ಷಕ ದಳ,ಎನ್.ಸಿ.ಸಿ. ಕಾಲ್ದಳ, ನೌಕದಳ, ವಾಯುದಳ, ಸ್ಕೌಟ್ ಮತ್ತು ಗೈಡ್ಸ್ ಬಾಲಕಿಯರು ಸೇರಿದಂತೆ ಹಲವಾರು ತುಕಡಿಗಳಿಂದ ಜನರ ಗಮನ ಸೆಳೆದರು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಸಾಹಸ ಕ್ರೀಡೆಗಳ ಮಧ್ಯೆ ಕೆಲವು ಸಾಂಸ್ಕೃತಿಕ ಕಾರ್ಯಗಳು ನಡೆದವು, ಕನ್ನಡ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ ಸಾರುವ ಗೀತೆಗಳಿಗೆ ನೃತ್ಯ ಪ್ರದರ್ಶಿಸಲಾಯಿತು. ವಿವಿಧ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ನೃತ್ಯ ಮಾಡಿದರು ಮೈಸೂರಿನ ರಂಗಾಯಣದ ಮಾಜಿ ನಿರ್ದೇಶಕರಾದ ಜನಾರ್ಧನ್ ಹಾಡಿರುವ ನೀರು ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಗೀತೆಯನ್ನು ಹಾಡಲಾಯಿತು.

**ಗೌರವ ವಂದನೆ ಸ್ವೀಕಾರ:**ಕಾರ್ಯಕ್ರಮದ ಪ್ರಾರಂಭದಲ್ಲಿ ರಾಜ್ಯಪಾಲರಿಗೆ ಗೌರವ ವಂದನೆ ನೀಡುವಲ್ಲಿ ಹಲವಾರು ಸೇನಾ ತುಕಡಿಗಳು ಗೌರವ ಸಲ್ಲಿಸಿದವು. ಭೂದಳ, ನೌಕದಳ, ವಾಯುದಳ, ಭಾರತೀಯ ಸೇವಾದಳ ದಳ ಸ್ಕೌಟ್ ಮತ್ತು ಗೈಡ್ಸ್ ತಂಡಗಳು ಪಥಸಂಚಲನ ಮಾಡಿ ರಾಜ್ಯಪಾಲರಿಗೆ ಗೌರವ ವಂದನೆ ಸಲ್ಲಿಸಿದರು.

–ಶಾಂತರಾಜ್

# ಕಂಸಾಳೆ ಹಿಂದಿದೆ ನೋವಿನ ಸಂಗತಿ!

## *ಮೂಲ ಕಲಾವಿದರು ಮೂಲೆ ಗುಂಪಾಗುತ್ತಿದ್ದರೆ:– ಸಿದ್ದರಾಮು*

ನುಣುಪಾದ ಲಯಬದ್ದ ಹೊಡೆತಗಳೊಂದಿಗೆ ನುಡಿಸುತ್ತಾ ಕಲೆಗಳನ್ನು ಲೆಕ್ಕವಿಲ್ಲದ ಮಾದರಿಗಳಲ್ಲಿ ನರ್ತಕದೇಹದ ಸುತ್ತಲು ಪ್ರದರ್ಶಿಸುವ ಅದ್ಬುತ ಕಲೆ ಕಂಸಾಳೆ. ಆದರೆ ಸುಮಧುರ ತಾಳದ ಹಿಂದಿನ ನೋವು ಯಾರಿಗೂ ಕೇಳಿಸುತ್ತಿಲ್ಲ, ಎಂಬುದನ್ನು ವ್ಯಕ್ತಪಡಿಸಿದ್ದು ಕಂಸಾಳೆ ಮಹದೇವಯ್ಯ ಕಲಾ ಸಂಘದ ಅಧ್ಯಕ್ಷ ಸಿದ್ದರಾಮು. ಅನುಭವವಿಲ್ಲದ ಕಲಾವಿದರಿಗೆ ಅವಕಾಶಗಳನ್ನು ನೀಡಿ, ವೃತ್ತಿಪರ 'ಕಲಾವಿದರ ಹೊಟ್ಟೆಗೆ 'ತಣ್ಣೀರು ಬಟ್ಟೆ ಹಾಕಿದಂತಗುತ್ತಿದೆ, ಸರ್ಕಾರದಿಂದ ಜರಗುವ ಕಾರ್ಯಕ್ರಮದಲ್ಲಿ ಪ್ರದರ್ಶನಗೊಳ್ಳುವ ಕಂಸಾಳೆಯ ತಂಡದ ಆಯ್ಕೆಗೂ ರಾಜಕೀಯ ಮೂಗುತೂರಿಸುತ್ತಿದೆ. ಇದರಿಂದ ಕಂಸಾಳೆ ಪ್ರದರ್ಶನಗಳನ್ನೇ ನೆಚ್ಚಿಕೊಂಡುಜೀವನ ಸಾಗಿಸುತ್ತಿರುವ ಮೂಲ ಕಲಾವಿದರ ಗೋಳು ಹೇಳತೀರದಂತಾಗಿದೆ.



ಸಮಸ್ಯೆಗಳನ್ನು ಬಗೆಹರಿಸಬೇಕಿದ್ದ ಕನ್ನಡ ಮತ್ತು ಸಂಸ್ಕ್ರತಿ ಇಲಾಖೆ ಕೈಕಟ್ಟಿ ಕುಳಿತಿದೆ, ಈ ನಿಟ್ಟಿನಲ್ಲಿ ಸರ್ಕಾರದ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿದರೂ ಸರ್ಕಾರದ ಹಣಕಲಾವಿದರ ಕೈತಲುಪುವ ಹೊತ್ತಿಗೆ ಕನಿಷ್ಠ 5 ರಿಂದ 6 ತಿಂಗಳು ಹಿಡಿಯುತ್ತದೆ. ನಮ್ಮ ನೋವುಗಳನ್ನು ಕೇಳುವವರು ಮತ್ತು ಸ್ಪಂದಿಸುವವರೆ ಯಾರು ಇಲ್ಲ ಹಾಗೂ ನಮಗೆ ಹಣದ ಅವಶ್ಯಕತೆ ಎಷ್ಟಿದಿಯೋ ಅದಕ್ಕಿಂತ ಮಿಗಿಲಾಗಿ ಮೂಲ ಕಲಾವಿದರ ಬೆಳವಣಿಗೆಯು ಅಷ್ಟೇ ಮುಖ್ಯಾವಾಗಿದೆ. ಆದ್ದರಿಂದ ಪ್ರದರ್ಶನದ ಆಯ್ಕೆಯಲ್ಲಿ ರಾಜಕೀಯ ಮಾಡದೆ ಮೂಲ ಕಲಾವಿದರಿಗೆ ಮೊದಲ ಆದ್ಯತೆ ನೀಡಿ ಎಂದು ದಸರಾ ವಸ್ತು ಪ್ರದರ್ಶನದ ಉದ್ಘಾಟನೆಗೆ ಕಂಸಾಳೆ ಪ್ರದರ್ಶನ ನೀಡಿದ ಕಂಸಾಳೆ ಕಲಾವಿದರು ತಮ್ಮ ಅಳಲನ್ನು ತೋಡಿಕೊಂಡರು.

- ಕವನ.ಬಿ.ಎನ್

# ಆರಕ್ಷಕರ ವಾದ್ಯಗೋಷ್ಠಿಗೆ ಮನಸೋತ ವೀಕ್ಷಕರು

## *ಏಕಕಾಲದಲ್ಲಿ 458 ಜನರಿಂದ ವಾದ್ಯಗೋಷ್ಠಿ! ಸಂಸ್ಕೃತಿ ಉಳಿಸುವಲ್ಲಿ ಪೋಲಿಸರ ಸಾಥ್*



**ದಸರಾ ಪ್ರಯುಕ್ತ ನಗರ ಪೊಲೀಸರಿಂದ ಏರ್ಪಡಿದ್ದ ವಾದ್ಯಾಗೋಷ್ಠಿ**

ಸದಾ ಲಾಟಿ ಹಿಡಿದು ಬೂಟಿನ ಸದ್ದಿನೊಂದಿಗೆ ಅಪರಾಧಿಗಳನ್ನು ಎದುರಿಸಿ ನಲ್ಲುತ್ತಿದ್ದ ಆರಕ್ಷಕರು ಲಾಟಿ ಬದಲಾಗಿ ಬ್ಯಾಂಡ್ ಹಿಡಿದು ಪ್ರೇಕ್ಷಕರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿ ಸಾಂಪ್ರದಾಯಿಕ ದಸರೆಯಲ್ಲಿ ಎಲ್ಲರ ಮನಗೆದ್ದರು. ಪೊಲೀಸರು ಎಂದಾಕ್ಷಣ ನಮ್ಮಲ್ಲಿ ಮೂಡಿಬರುವುದೇನೆಂದರೆ ಲಾಠಿ, ಬಂದೂಕು ಅಷ್ಟೆ ಆದರೆ ನಮ್ಮ ಪೋಲಿಸರು ಸಾರ್ವಜನಿಕರ ರಕ್ಷಣೆ ಮಾತ್ರವಲ್ಲ ಮನೋರಂಜನೆ ನೀಡುವುದಕ್ಕೂ ನಾವು ಸೈ ಎಂದು ಅರಮನೆ ಆವರಣದಲ್ಲಿ ವಾದ್ಯಗೋಷ್ಠಿಯನ್ನು ನಡೆಸುವುದರ ಮೂಲಕ ತೋರಿಸಿಕೊಟ್ಟರು.

**ಇತಿಹಾಸ ಒಂದಿಷ್ಟು** –4ನೇ ಕೃಷ್ಣರಾಜ ಒಡೆಯರ್ ಬಹದ್ದೂರ್‌ಅವರ ಪ್ರೋತ್ಸಾಹ ದಿಂದ ಅರಮನೆ ಬ್ಯಾಂಡ್ ಸಾಂಪ್ರದಾಯಕ ನಗರಿಯಲ್ಲಿ ಲೋಕರ್ಪಣೆಗೊಂಡಿತು. 1951 ರಲ್ಲಿ ಅರಮನೆ ಬ್ಯಾಂಡ್ ಪೋಲೀಸ್ ಬ್ಯಾಂಡ್‌ಯಾಗಿ ಪೋಲಿಸ್ ಇಲಾಖೆ ಯೊಂದಿಗೆ ಸೇರಲ್ಪಟ್ಟಿತ್ತು. ಪ್ರಾರಂಭದಲ್ಲಿ 56 ಅರಮನೆ ಮಂದಿ 34 ಮಂದಿ ಪೋಲೀಸ್‌ಇಲಾಖೆಯಲ್ಲಿ ಮಂಜೂರು ನೀಡಲಾಗಿತ್ತು. ಹಾಗಾಗಿ ಪ್ರಾರಂಭದಲ್ಲಿ ಆರಕ್ಷಕರು ರಂಜಿಸುತ್ತಿದ್ದ ಈ ಕಾರ್ಯಕ್ರಮವನ್ನು ಪೋಲೀಸ್ ಬ್ಯಾಂಡ್ ಎಂದು ಕರೆಯಲಾಗುತ್ತಿತ್ತು. ಫ್ರಾನ್ಸ್ ದೇಶದ ಫೆಫ್ರಿನ್ ಮೊದಲ ಬ್ಯಾಂಡ್ ಮಾಸ್ಟರ್. ನಾಡಿನ ಅರಸರಿಗೆ ದೇಸಿ ಸಂಗೀತ ಮಾತ್ರವಲ್ಲ, ವಿದೇಶಿ ಸಂಗೀತದ ಅಭಿರುಚಿಯೂ ಇತ್ತು ಎನ್ನುವುದಕ್ಕೆ ಅರಮನೆ ಬ್ಯಾಂಡ್ ಸಾಕ್ಷಿಯಾಗಿದೆ.

**ವಿಶೇಷತೆ&ಅರ್ಹತೆ:** ರಾಜ್ಯದ ವಿವಿಧ ಜಿಲ್ಲೆಯಿಂದ 45 ಪೋಲೀಸ್ ತಂಡಗಳು ಸಂಗೀತ ನುಡಿಸುತ್ತವೆಯಾದರೂ ಅವುಗಳು ತಮ್ಮ ದೈನಂದಿನ ಪೋಲೀಸ್ ಕಾಯಕವನ್ನು ಜತೆಯಲ್ಲಿಯೇ ಮಾಡಬೇಕಾಗುತ್ತದೆ. ಆದರೆ ಕೇವಲ ಸಂಗೀತಕ್ಕೆ ಮೀಸಲಾಗಿರುವ ತಂಡಗಳೆಂದರೆ;

ಈ ಪೋಲೀಸ್ ಬ್ಯಾಂಡ್‌ನಲ್ಲಿ ಕರ್ನಾಟಕದ ಪ್ರತಿಜಿಲ್ಲೆಯಿಂದಲೂ ಸಹ ಪೋಲಿಸರು ಆಗಮಿಸುತ್ತಾರೆ ಆದರೆ ಅವರೆಲ್ಲರಿಗೂ ಕಂದು ಬಣ್ಣದ ಸಮವಸ್ತ್ರವನ್ನು ನೀಡಲಾಗುತ್ತದೆ. ಆದರೆ ಮೈಸೂರು ಪೋಲೀಸ್ ಬ್ಯಾಂಡ್ ಮಾತ್ರ ಸಾಂಪ್ರದಾಯಿ ಕತೆಯನ್ನು ಎತ್ತಿಹಿಡಿಯಲು ಹಸಿರು ಬಣ್ಣದ ಸಮವಸ್ತ್ರ ನೀಡಲಾಗುತಿತ್ತು ಈ ಬಾರಿ ಸಮಾನತೆ ಕಪಾಡಲು ಮೈಸೂರು ಪೋಲಿಸರಿಗೂ ಕಂದು ಬಣ್ಣದ ಸಮವಸ್ತವನ್ನು ನೀಡಲಾಗಿದೆ ಎಂದು ಮೈಸೂರು ಪೋಲೀಸ್ ಆಯುಕ್ತ ಜಿ. ಸುಬ್ರಮಣ್ಯೇಶ್ವರ್‌ರಾವ್ ತಿಳಿಸಿದರು. ಪೋಲಿಸ್ ಬ್ಯಾಂಡ್‌ನ ಇತಿಹಾಸದಲ್ಲೇ ಮೊದಲ ಬಾರಿಗೆ ಪೋಲಿಸ್ ಬ್ಯಾಂಡ್‌ನ ಎಲ್ಲಾ ಮ್ಯೂಸಿಕ್‌ಗಳನ್ನೊಂಡ ಸಿಡಿಯನ್ನು ಬಿಡುಗಡೆ ಮಾಡಿದರು.

- ಕವನ.ಬಿ.ಎನ್

# ಸಂಸ್ಕೃತಿಯ ಪ್ರತೀಕ: ದಸರಾ ವಸ್ತು ಪ್ರದರ್ಶನ

ಕನ್ನಡ ನಾಡಿನ ಸಂಸ್ಕೃತಿಯನ್ನು ಸಾರಿದ ಶಿಲ್ಪ ಕಲೆಗಳು ಗೋಡೆಗಳ ಮೇಲೆ ವರ್ಣಿಸುತ್ತಿತ್ತು. ರಾಜ್ಯಗಳಿಗಾಗಿ ಆಳ್ವಿಕೆ ನಡೆಸುತ್ತಿದ್ದರಾಜರು ಪ್ರೇಕ್ಷಕರಿಗೆ ಮನರಂಜನೆ ನೀಡಲು ಕೈ ಬೀಸಿ ಕರೆಯುತ್ತಿದ್ದರು, ಈ ಆಶ್ಚರ್ಯಕರ ದೃಶ್ಯ ಕಂಡು ಪ್ರೇಕ್ಷಕರು ಧಾವಿಸಿದ್ದು ದಸರಾ ವಸ್ತು ಪ್ರದರ್ಶನಕ್ಕೆ.



**ಅಮೇರಿಕಾ ಶ್ವೇತ ಭವನದ ಸಾಂಧರ್ಭಿಕ ಚಿತ್ರ**

**ವಸ್ತು ಪ್ರದರ್ಶನದಲ್ಲಿ ಪ್ರಮುಖ ಆಕರ್ಷಣೆಗಳು**

**ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ** :"ಸುರಗಂಗೆಯೂ ಧರೆಗಿಳಿಯುವಂತೆ–ಭೂದೇವಿಯ ಮೈ ತೊಳೆಯು ವಂತೆ"ಎನ್ನುವಂತೆ ಜಲಸಂಪನ್ಮೂಲದ ಪ್ರಾಮುಖ್ಯತೆಯೂ ಕೃತಕ ಕೆಆರ್‌ಎಸ್ ಜಲಾಶಯವಾಗಿ ನಿರ್ಮಾಣಗೊಂಡಿತ್ತು. ಇಲಾಖೆಯು ನೀರಿಗಾಗಿಅರಣ್ಯ ಎಂಬ ಯೋಜನೆಯೊಂದಿಗೆ ಅರಣ್ಯವನ್ನು ಚಿತ್ರಿಸುವಂತಹ ಸಣ್ಣ–ಸಣ್ಣ ಗುಹೆಗಳು, ಸಣ್ಣ–ಸಣ್ಣ ಕಾಲುವೆಗಳು, ಆನೆ,ಹುಲಿ,ಜಿಂಕೆ ಪ್ರತಿಮೆಗಳ ನಿರ್ಮಾಣಗಳು ಪ್ರವಾಸಿಗರನ್ನು ಸೆಳೆಯುತ್ತಿವೆ. ಕೃಷಿ ಅರಣ್ಯ, ಚಂದನವನ ಯೋಜನೆ, ಹಸಿರುಗ್ರಾಮ, ಸಾಲುಮರದ ತಿಮ್ಮಕ್ಕ ವೃಕ್ಷಉದ್ಯಾನ, ಶಾಲೆಗೊಂದು ವನ, ಕೋಟಿ ವೃಕ್ಷಆಂದೋಲನ ಇವುಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡುವ ಫ್ಲೆಕ್ಸ್‌ಗಳನ್ನು ಕಾಣಬಹುದಾಗಿದೆ. ವಿಶೇಷವೆಂದರೆ 5 ರೂ. ಹಾಗೂ 3 ರೂ.ಗಳಿಗೆ ಸಸಿಗಳನ್ನು ಮಾರಾಟ ಮಾಡಲಾಗುತ್ತಿದೆ.

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ನುಡಿದಂತೆ ನಡೆಯುತ್ತಿದ್ದೇವೆ ಎಂಬ ಧ್ಯೇಯ ವಾಕ್ಯದೊಂದಿಗೆ ರಾಜ್ಯ ಸರ್ಕಾರ ತಮ್ಮ ನಾಲ್ಕು ವರ್ಷದ ಆಡಳಿತ ಬಿಂಬವನ್ನು ಚಿತ್ರಿಸಿದೆ. ಅವುಗಳಲ್ಲಿ ಪ್ರಮುಖವಾಗಿ ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ,ಕೃಷಿಭಾಗ್ಯ, ಶಾದಿಭಾಗ್ಯ,ಆರೋಗ್ಯಭಾಗ್ಯ ಮುಂತಾದವುಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

**ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ಇಲಾಖೆ:** ನೋಡಲು ಆಕರ್ಷಕವಾಗಿ ಚಿತ್ರಿಸಿ ಪ್ರವಾಸಿಗರನು ಪ್ರವಾಸಿ ತಾಣಕ್ಕೆ ಕೊಂಡೊಯ್ದಂತೆ ಆಗಿದೆ. ಒಂದುರಾಜ್ಯ ಹಲವು ಜಗತ್ತು ಎಂಬ ಸಂದೇಶವನ್ನು ಸಾರುವಂತೆ ಒಳಗೆ ರಾಜ್ಯದಎಲ್ಲಾ ಜಿಲ್ಲೆಗಳ ಪ್ರವಾಸಿ ತಾಣಗಳ ಬಗ್ಗೆ ಭಾವಚಿತ್ರಗಳನ್ನು ಚಿತ್ರಿಸಿ ಕೊಂಚ ಮಾಹಿತಿಯನ್ನು ನೀಡಲಾಗುತ್ತಿದೆ. ಸಾಂಸ್ಕೃತಿಕ ಪರಂಪರೆಯ ಕರ್ನಾಟಕವನ್ನು ಕಲ್ಲಿನ ಮಂಟಪಗಳಾಗಿ ಚಿತ್ರಿಸಿ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿದ ಹಾಗೇ ಕಣ್ಣಿಗೆಕಟ್ಟುವಂತೆ ತಯಾರಿಸಿದ್ದಾರೆ.

**ಮೈಸೂರಿನಲ್ಲಿ ಅಮೆರಿಕಾ ಶ್ವೇತಭವನ!!!**

ನಮ್ಮಲ್ಲಿನ ಕನ್ನಡಿಗರು ಪ್ರವಾಸಿ ತಾಣಗಳನ್ನು ವೀಕ್ಷಿಸುವಾಗ ಅಥವಾ ಸಿನಿಮಾಗಳಲ್ಲಿ ವೈಟ್‌ಹೌಸ್ ನೋಡಿ ಅದರ ವೈಭವಕ್ಕೆ ಬೆರಗಾಗಿ ಒಮ್ಮೆಯಾದರು ಅಲ್ಲಿಗೆ ಭೇಟಿ ನೀಡಬೇಕು ಎನ್ನುತ್ತಿದ್ದವರ ಕನಸು ಇದೀಗ ಸಾಂಪ್ರದಾಯಿಕ ದಸರೆಯಲ್ಲಿ ನನಸಾಗಲಿದೆ.

ಕರ್ನಾಟಕ ವಸ್ತು ಪ್ರದರ್ಶನವನ್ನು ಗುತ್ತಿಗೆ ಪಡೆದಿರುವವರು ಈ ವೈಟ್‌ಹೌಸ್‌ನ ಜವಾಬ್ದಾರಿ ವಹಿಸಿದ್ದು ಅಮೇರಿಕಾದ ಮಾದರಿಯಲ್ಲಿಯೇ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ದಸರಾ ವಸ್ತು ಪ್ರದರ್ಶನದಲ್ಲಿ ವೈಟ್‌ಹೌಸ್ ಮಾದರಿ ನಿರ್ಮಿಸಿದ್ದಾರೆ.

**ಕಳೆದ ಬಾರಿ ಗಮನ ಸೆಳೆದ ವೈಷ್ಣೋದೇವಿ ದರ್ಶನ:** ಕಳೆದ ವರ್ಷ ಸರಳ ದಸರೆಯಲ್ಲಿ 'ವೈಷ್ಣೋದೇವಿ' ಮತ್ತು 'ಮಾನಸ ಸರೋವರ'ದ ಮಾದರಿ ನಿರ್ಮಿಸಿ ಪ್ರವಾಸಿಗರ ಗಮನ ಸೆಳೆಯಲಾಗಿತ್ತು. 2015ರಲ್ಲಿ ಪ್ರಪಂಚದ 7 ಅದ್ಭುತಗಳ ಮಾದರಿ ನಿರ್ಮಿಸಲಾಗಿತ್ತು. ಪ್ರವಾಸಿಗರು ತಾಜ್‌ಮಹಲ್, ಚೀನಾದ ಮಹಾಗೋಡೆ, ಬ್ರೆಜಿಲ್‌ನ ವಿಮೋಚಿತ 'ಕ್ರಿಸ್ತ(ಕ್ರಿಸ್ತ್ ದಿ ರಿಡೀಮರ್), ಇಟಲಿಯ ಕೊಲೋಸಿಯಂ, ಮೆಕ್ಸಿಕೋದ ಚಿಚೇನ್‌ಇಟ್ಸಾ, ಜೋರ್ಡಾನ್‌ನ ಪೆಟ್ರಾ ಕಣ್ತುಂಬಿ ಕೊಂಡಿದ್ದರು.

– ಹರೀಶ್.ಎಸ್

ವಸ್ತುಪ್ರದರ್ಶನದಲ್ಲಿ ಈ ಬಾರಿ ಫ್ಲೆಕ್ಸ್‌ಗಳಿಗೆ ಹೆಚ್ಚಿನಆಧ್ಯತೆಯನ್ನು ನೀಡಲಾಗಿದೆ. ಅದೇಕಾರ್ಯವನ್ನುಇಲ್ಲಿಯ ಸ್ಥಳೀಯ ಕಲಾವಿದರಿಗೆ ನೀಡಿದರೆಕನ್ನಡದ ಬಳಕೆಯ ಜತೆಗೆಜಾನಪದ ಶೈಲಿಯಲ್ಲಿಇನ್ನೂ ಹೆಚ್ಚು ಆಕರ್ಷಣೀಯವಾಗಿಕಾಣುವಂತೆ ಮಾಡುತ್ತಿದ್ದರು.

**– ಅಭಿಲಾಷ್, ಮಂಡ್ಯಕಲಾವಿದ.**

**ಪುಟವಿನ್ಯಾಸ:** ಕವನ.ಬಿ.ಎನ್
**ಛಾಯಾಚಿತ್ರ:** ಹರೀಶ್.ಎಸ್
**ಸಂಪಾದಕರು:** ಹರೀಶ್.ಎಸ್, ದಿವ್ಯಜ್ಯೋತಿ.ಪಿ, ನರೇಂದ್ರ.ಡಿ, ಸಂಜಯ್.ಬಿ.ಸಿ